ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮಾರ್ಚ್ 2022 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 6
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | March 2022 | Monthly**




A Journal of Karnataka Rajya Madhyamika Shikshaka Sangha (R.)

# ಮಹಿಳಾ ದಿನಾಚರಣೆ



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

ಮಾರ್ಚ್ 8 ಅಂತರ್‌ರಾಷ್ಟ್ರೀಯ ಮಹಿಳಾ ದಿನವೆಂದು ಪ್ರತೀವರ್ಷ ಈ ದಿನ ಮಹಿಳೆಯರೆಲ್ಲರು ಪ್ರಪಂಚದಾದ್ಯಂತ ಸಂಭ್ರಮಪಡುತ್ತಾರೆ. ಇದು ಮಹಿಳಾ ಹಕ್ಕುಗಳ ಆಂದೋಲನದಲ್ಲಿ ಕೇಂದ್ರಬಿಂದುವೆನಿಸಿಕೊಂಡಿದೆ. ಇದು ಮಹಿಳೆಯರ ವಿರುದ್ಧದ ದೌರ್ಜನ್ಯ ಮತ್ತು ನಿಂದನೆಯಂತಹ ಎಲ್ಲ ವಿಷಯಗಳ ಬಗ್ಗೆ ಪ್ರತಿಭಟಿಸಬೇಕೆನ್ನುವ, ಅವರ ಆತ್ಮಗೌರವವನ್ನು, ವ್ಯಕ್ತಿತ್ವದ ಮರ್ಯಾದೆಯನ್ನು ರಕ್ಷಿಸಿಕೊಳ್ಳಬೇಕೆಂಬ ಜಾಗೃತಿಯನ್ನು ಮೂಡಿಸುವ ದಿನವೂ ಆಗಿದೆ. ಲಿಂಗ ಸಮಾನತೆಯನ್ನು ಬಯಸುವ ದಿನವಾಗಿದೆ.

20ನೇ ಶತಮಾನದ ಆರಂಭದಲ್ಲಿ ಉತ್ತರ ಅಮೇರಿಕ ಮತ್ತು ಯುರೋಪ್‌ನಲ್ಲಿ ಕಾರ್ಮಿಕ ಚಳವಳಿಗಳಿಂದ ಪ್ರೇರಣೆ ಹುಟ್ಟಿ 1909ರ ಫೆಬ್ರವರಿ 28ರಂದು ನ್ಯೂಯಾರ್ಕ್ ನಗರದಲ್ಲಿ ಅಮೇರಿಕದ ಸಮಾಜವಾದಿ ಪಕ್ಷ ಆಯೋಜಿಸಿದ 'ಮಹಿಳಾ ದಿನ' ಎಂಬ ಪರಿಕಲ್ಪನೆ ಆರಂಭವಾಯಿತು. ವಿಶ್ವಸಂಸ್ಥೆಯ ಕಡೆಯಿಂದ 1975ರಲ್ಲಿ 'ಅಂತರ್‌ರಾಷ್ಟ್ರೀಯ ಮಹಿಳಾ ವರ್ಷ'ವೆಂದು ಘೋಷಣೆಯಾಯಿತು. 1977ರಲ್ಲಿ ಯುನೈಟೆಡ್ ನೇಷನ್ಸ್‌ನ ಜನರಲ್ ಅಸೆಂಬ್ಲಿ ಮಾರ್ಚಿಯಲ್ಲಿ ಮಹಿಳಾಹಕ್ಕುಗಳು ಮತ್ತು ವಿಶ್ವಶಾಂತಿಗಾಗಿ ಅಧಿಕೃತ ವಿಶ್ವಸಂಸ್ಥೆಯ ಕಡೆಯಿಂದ ರಜಾ ದಿನವೆಂದು ಘೋಷಿಸಲು ಸದಸ್ಯರಾಷ್ಟ್ರಗಳನ್ನು ಆಹ್ವಾನಿಸಿತು. ಅಂದಿನಿಂದ ಇದನ್ನು ಯುನೈಟೆಡ್ ನೇಷನ್ಸ್ ಮತ್ತು ಪ್ರಪಂಚದ ಹೆಚ್ಚಿನ ಭಾಗಗಳಿಂದ ವಾರ್ಷಿಕವಾಗಿ ಸ್ಮರಿಸಲಾಗುತ್ತಿದೆ. ಪ್ರತಿ ವರ್ಷದ ಆಚರಣೆಯು ಮಹಿಳಾ ಹಕ್ಕುಗಳೊಂದಿಗೆ ನಿರ್ದಿಷ್ಟ ವಿಷಯ ಅಥವಾ ಸಮಸ್ಯೆಯ ಮೇಲೆ ಕೇಂದ್ರೀಕೃತವಾಗಿದೆ.

ನಮ್ಮಲ್ಲಿ ಕೂಡ ಮಾರ್ಚಿ 8ನೇ ತಾರೀಖಿನಂದು 'ಮಹಿಳಾದಿನ'ವೆಂದು ಸಂಭ್ರಮಿಸುತ್ತೇವೆ. ಸರ್ಕಾರದ ಕಡೆಯಿಂದ, ಖಾಸಗಿ ಸಂಘ, ಸಂಸ್ಥೆಗಳ ಕಡೆಯಿಂದ ವಿಶೇಷ ಸಾಧಕಿಯರನ್ನು ಸನ್ಮಾನಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಸ್ವಲ್ಪ ಚಿಂತನೆಯನ್ನು ಮಾಡುವ ಅಗತ್ಯವಿದೆ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ' ಎಂಬ ಮನುವಿನ ಮಾತು ಎಲ್ಲರಿಗೂ ತಿಳಿದದ್ದೇ. ಹಾಗೆ ನೋಡಿದರೆ ಪಾಶ್ಚಿಮಾತ್ಯ ದೇಶಗಳೂ ಸೇರಿದಂತೆ ಹಲವು ದೇಶಗಳಲ್ಲಿ ಮಹಿಳೆಗೆ ಆಕೆಯ ಜನ್ಮಸಿದ್ಧಹಕ್ಕಾದ ಮತದಾನದ ಹಕ್ಕು ಲಭಿಸುವ ಬಹಳ ವರ್ಷಗಳ ಮೊದಲೇ ಭಾರತೀಯ ಮಹಿಳೆಗೆ ಆ ಗೌರವವಿತ್ತು. ಆದರೆ, ವಿಪರ್ಯಾಸವೆಂದರೆ, ಒಂದು ಕಾಲದಲ್ಲಿ ಬ್ರಹ್ಮವಾದಿನಿಯರಾಗಿ ಜ್ಞಾನದ ಭಂಡಾರವೇ ಎನಿಸಿದ್ದ ಮಹಿಳೆಯರನ್ನು, ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಗಣ್ಯ ಸ್ಥಾನವನ್ನು ಪಡೆದಿದ್ದ ಮಹಿಳೆಯರನ್ನು ಹೊಂದಿದ್ದ ಇದೇ ಭಾರತದ ನೆಲದಲ್ಲಿ ಇಂದು ವಿದ್ಯಾವಂತ, ಅವಿದ್ಯಾವಂತ, ನಗರ, ಗ್ರಾಮೀಣ, ಉದ್ಯೋಗಸ್ಥ, ಗೃಹಕೃತ್ಯದ ಹೊಣೆಯಷ್ಟೇ ಹೊತ್ತ, ಶ್ರೀಮಂತ, ಬಡವ ಈ ಯಾವ ಭೇದವೂ ಇಲ್ಲದೆ ಹಲವು ರೀತಿಗಳಲ್ಲಿ ಹೆಣ್ಣುಮಕ್ಕಳು ದೈಹಿಕ, ಮಾನಸಿಕ ಶೋಷಣೆಗಳಿಗೆ ತುತ್ತಾಗುತ್ತಲೇ ಇದ್ದಾರೆ. ಇಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳೂ ಸೇರಿದ್ದಾರೆಂಬ ಕಟುಸತ್ಯವಿದೆ. ಅದೆಷ್ಟೇ ಕಾನೂನುಗಳನ್ನು ಆಡಳಿತ ವ್ಯವಸ್ಥೆಯಲ್ಲಿ ತಂದರೂ ಸಹ ಪುರುಷ ಪ್ರಧಾನ ಸಮಾಜದ ಹಿಡಿತವಿನ್ನೂ ತನ್ನ ದೌರ್ಜನ್ಯ, ದಬ್ಬಾಳಿಕೆಗಳನ್ನು ನಡೆಸುತ್ತಲೇ ಬಂದಿದೆ. ಪ್ರತಿನಿತ್ಯ ದೇಶದ ಯಾವುದಾದರೊಂದು ಮೂಲೆಯಿಂದ ಇಂತಹ ಸುದ್ದಿ, ಹೇಯ, ಬರ್ಬರ, ಅನಾಗರೀಕ, ಪೈಶಾಚಿಕವೆಂದರೂ ಸರಿಯೆ, ಸುದ್ದಿಗಳು ಕಿವಿಯ ಮೇಲೆ ಬೀಳುತ್ತಲೇ ಇವೆ. ಅಂತಹ ಘಟನೆಗಳು ಘಟಿಸುತ್ತಲೇ ಇವೆ. ಬಲಿಪಶುಗಳ ಆಕ್ರಂದನ, ಅಸಹಾಯಕ ಕೂಗು ಕೇಳುತ್ತಲೇ ಇದೆ. ಹೆಣ್ಣುಮಕ್ಕಳ ತಾಯಿ ತಂದೆಗೆ ಆ ಮಕ್ಕಳು ಮನೆಯಿಂದ ಹೊರಗೆ ಹೋಗಿ ಹಿಂತಿರುಗಿ ಬರುವವರೆಗೆ ಆತಂಕ ತಪ್ಪಿದ್ದಲ್ಲ. ಇಂತಹ ಅಭದ್ರ ಪರಿಸ್ಥಿತಿ ದೇಶದ ಅದೆಷ್ಟೋ ಕಡೆಗಳಲ್ಲಿದೆಯೆಂಬ ಕಹಿಸತ್ಯ ಕಣ್ಣಿಗೆ ರಾಚುತ್ತಲೇ ಇದೆ.


**ಸಾಲುಮರದ ತಿಮ್ಮಕ್ಕ**



**ಆತ್ಮವಿಶ್ವಾಸ ಮತ್ತು ಕ್ರಿಯಾಶೀಲತೆಯ ಪ್ರತಿರೂಪ : ಮಹಿಳೆ**

ಹಾಗಾದರೆ ಇದಕ್ಕೆ ಪರಿಹಾರವೇನು? ಹೆಣ್ಣು ತನ್ನನ್ನು ತಾನೇ ರಕ್ಷಿಸಿಕೊಳ್ಳುವ ಎಲ್ಲ ಬಗೆಯ ಸಾಮರ್ಥ್ಯವನ್ನು ಹೊಂದಬೇಕು. ಅದಕ್ಕೆ ಅಗತ್ಯವಾದ ಶಿಕ್ಷಣವನ್ನು, ದೈಹಿಕ, ಮಾನಸಿಕ ದೃಢತೆಯನ್ನು ಚಿಕ್ಕಂದಿನಿಂದಲೇ ಆಕೆಗೆ ಒದಗಿಸಬೇಕು. ತನ್ನಲ್ಲಿನ ಪ್ರತಿಭೆಯನ್ನಾಗಲೀ, ಕಾರ್ಯಕ್ಷಮತೆಯನ್ನಾಗಲೀ ಸಮಾಜದ ಮುಂದೆ ಅನಾವರಣ ಮಾಡುವ ಅವಕಾಶ ಅವಳಿಗೆ ಸಿಕ್ಕಬೇಕು. ಹೆಣ್ಣು ಎಂಬ ಒಂದೇ ಕಾರಣಕ್ಕೆ ಆಕೆಯು ಅದೆಷ್ಟೇ ಸಮರ್ಥ ಅಧಿಕಾರಿಯಾಗಿದ್ದರೂ ಆಕೆಯ ಅಧೀನದಲ್ಲಿ ಕೆಲಸ ಮಾಡಲು ಹಿಂಜರಿಯುತ್ತ, ಅಸಮಾಧಾನದಿಂದಲೇ ಕಾರ್ಯನಿರ್ವಹಿಸುವ ಪುರುಷರ ಸಂಖ್ಯೆಯೂ ಕಡಿಮೆಯಿಲ್ಲ. ಇವೆಲ್ಲ ಇಲ್ಲವಾಗಬೇಕು, ಅರ್ಹತೆಗೆ, ದಕ್ಷತೆಗೆ ಲಿಂಗ ತಾರತಮ್ಯಬೇಕಿಲ್ಲ. ಸ್ವಾವಲಂಬಿಗಳಾಗಿ ಸಮಾಜದ ಗಟ್ಟಿಸ್ತಂಭಗಳಲ್ಲಿ ತಾವೂ ನಿಲ್ಲುತ್ತ ತಮ್ಮ ವ್ಯಕ್ತಿತ್ವದ ದೃಢತೆಯನ್ನು ನಿರೂಪಿಸುತ್ತಿರುವ ಅದೆಷ್ಟೋ ಹೆಣ್ಣು ಮಕ್ಕಳು ಇಂದು ದೇಶದ ಮೂಲೆ ಮೂಲೆಗಳಿಂದಲೂ ಮುಂದೆ ಬರುತ್ತಿದ್ದಾರೆ. ಇಂತಹ ಉದಾಹರಣೆಗಳಿಂದ ಹೆಮ್ಮೆಪಡಬೇಕು. ಆಗಬೇಕಿರುವ ಇನ್ನಷ್ಟು ಸಾಧನೆಗಳು ಕಾರ್ಯಗತವಾಗುವತ್ತ ಚಿಂತನೆ ಮಾಡುತ್ತ, ಕಾರ್ಯರೂಪಕ್ಕೂ ಇಳಿಸುತ್ತಾ ಸಮಾಜದ ಅಡ್ಡದಾರಿಗಳನ್ನು ಮುಚ್ಚುವಲ್ಲಿ ಸೂಕ್ತಕ್ರಮಗಳನ್ನು ಕೈಗೊಳ್ಳುವತ್ತ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಕಾರ್ಯ ಆಗಬೇಕು. ಇದರಲ್ಲಿ ಸಮಾಜ, ಸರ್ಕಾರ ಎರಡೂ ಸಹಭಾಗಿಗಳಾಗಬೇಕು. ಮುಖ್ಯವಾಗಿ ಮಹಿಳೆ ತನ್ನ ಆತ್ಮಗೌರವಕ್ಕೆ ಕುಂದುಂಟಾಗುವ ಸಂದರ್ಭದಲ್ಲಿ ಅದನ್ನು ರಕ್ಷಿಸಿಕೊಳ್ಳುವ ದಿಟ್ಟತನವನ್ನು ಹೊಂದಬೇಕು. ಅದಕ್ಕೆ ಬೇಕಾದ ಸಾಮರ್ಥ್ಯವನ್ನು ಪಡೆದು ಆತ್ಮವಿಶ್ವಾಸದ ಸಾಕಾರಮೂರ್ತಿಯೆನಿಸಿಕೊಳ್ಳಬೇಕು. ಇದೆಲ್ಲ ಮಹಿಳಾದಿನದ ಸಂಕಲ್ಪವಾಗಿ, ಅನುಷ್ಠಾನಗೊಳಿಸುವ ಯಾತ್ರೆ ಪ್ರಾರಂಭಿಸಬೇಕು. ●

# ಶಿಕ್ಷಕರ ಸಂಘಟನೆ, ಅಸ್ತಿತ್ವ, ಬೆಳವಣಿಗೆ, ಹೋರಾಟ ಯಶಸ್ವಿಗಳಿಗೆ ನಾಂದಿ ಹಾಕಿದ ಶ್ರೀ ಮಳ್ಳೂರು ಆನಂದರಾವ್



**ಕೃ. ನರಹರಿ**
**ಸಂರಕ್ಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಶ್ರೀ ಮಳ್ಳೂರು ಆನಂದರಾಯರು ಶಿಡ್ಲಘಟ್ಟದಲ್ಲಿ ಪ್ರಾರಂಭಿಕ ಶಿಕ್ಷಣ ಮುಗಿಸಿ, ಬೆಂಗಳೂರು ಮತ್ತು ತುಮಕೂರಿನಲ್ಲಿ ಪದವಿ ವಿದ್ಯಾಭ್ಯಾಸ ಪೂರ್ಣಗೊಳಿಸಿ, ಶಿಡ್ಲಘಟ್ಟದಲ್ಲಿ ಮಾಧವ ವಿದ್ಯಾಲಯ ಎಂಬ ಖಾಸಗಿ ಟ್ಯೂಷನ್ ಕೇಂದ್ರವನ್ನು ಸ್ಥಾಪಿಸಿದ್ದರು. ಇದಕ್ಕೆ ಮುಂಚೆ ಕೆಲವು ಸಮಯ ಗುಲ್ಬರ್ಗದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪೂರ್ಣಾವಧಿ ಕಾರ್ಯಕರ್ತರಾಗಿದ್ದರು. ಇವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೂರು ವರ್ಷಗಳ ಶಿಕ್ಷಣವನ್ನು ಮುಗಿಸಿದರು. 1995 ರಿಂದ 1970ರವರೆಗೆ ಚಿತ್ರದುರ್ಗ ಜಿಲ್ಲೆಯ ಐಮಂಗಲದಲ್ಲಿನ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು.

ಶ್ರೀ ಮಳ್ಳೂರು ಆನಂದರಾಯರ ದಿಟ್ಟತನ, ಸಂಘಟನಾ ಕೌಶಲ್ಯ, ಹೋರಾಟದ ಪ್ರವೃತ್ತಿ, ಮುನ್ನುಗ್ಗಿ ಕೆಲಸಮಾಡುವ ಸ್ವಭಾವ, ಎಲ್ಲರನ್ನೂ ಮುಗ್ಧಗೊಳಿಸಬಲ್ಲ ಭಾಷಣಕಲೆ, ರಾಷ್ಟ್ರನಿಷ್ಠೆ ಇತ್ಯಾದಿ ಗುಣಗಳನ್ನು ಗುರುತಿಸಿದ್ದ ಸಂಘದ ಹಿರಿಯರು ಇವರಿಗೆ ಪ್ರೌಢಶಾಲಾ ಶಿಕ್ಷಕ ಹಾಗೂ ಶಿಕ್ಷಣದ ಕ್ಷೇತ್ರದಲ್ಲಿ ಸಂಘಪರಿವಾರದ ಸಂಘಟನೆಯನ್ನು ಪ್ರಾರಂಭಿಸಿ, ನಡೆಸುವ ಜವಾಬ್ದಾರಿ ವಹಿಸಿದರು. ಅದೇ ಸಮಯಕ್ಕೆ ಪೂನಾದ ಶ್ರೀ ಮುಕುಂದ ಕುಲಕರ್ಣಿಯವರು ಅಖಿಲ ಭಾರತ ಮಾಧ್ಯಮಿಕ ಶಿಕ್ಷಕ ಮಹಾ ಸಂಘದ (All India Secondary Teachers Federation) A.I.S.T.F. ನ ಪದಾಧಿಕಾರಿಗಳಾಗಿದ್ದರು. ಇವರು ಶ್ರೀ ಆನಂದರಾಯರಿಗೂ ಮೈಸೂರು ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವನ್ನೂ (ಆಗಿನ್ನೂ ಕರ್ನಾಟಕ ಏಕೀಕರಣ ಆಗಿರಲಿಲ್ಲ– ಏಕೀಕರಣದ ನಂತರ ಇದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಎಂದು ಬದಲಾಯಿತು) ಪ್ರಾರಂಭಿಸಿ ಇದನ್ನು A.I.S.T.F. ನೊಡನೆ ಸಂಲಗ್ನಗೊಳಿಸಿದರು. ಇವೆಲ್ಲಕ್ಕೂ ಶ್ರೀ ಮುಕುಂದ ಕುಲಕರ್ಣಿಯವರ ಮಾರ್ಗದರ್ಶನ ಇತ್ತು. ಈ ಶಿಕ್ಷಕ ಸಂಘದ ವಿಸ್ತರಣೆಯಲ್ಲಿ ಪ್ರೌಢಶಾಲಾ ಶಿಕ್ಷಕರುಗಳಾಗಿದ್ದ ಶ್ರೀ ಟಿ.ಬಿ.ಗೋವಿಂದರಾವ್, ಡಿ.ವಿ.ಸತ್ಯನಾರಾಯಣ, ಬ.ನ ರಘುರಾಂ ಇತ್ಯಾದಿ ಸಮಾನ ಮನಸ್ಕ ಶಿಕ್ಷಕರನ್ನು ಜೋಡಿಸಿಕೊಂಡು ಇಡೀ ರಾಜ್ಯದಲ್ಲಿ ಬಹುಬೇಗ ಸಂಘಟನೆಯನ್ನು ವಿಸ್ತರಿಸಿದರು. ಆಗ ಶಿಕ್ಷಕರಲ್ಲಿ ಯಾವ ತಂಟೆಗೂ ಹೋಗದ ಮಾನಸಿಕತೆ ಇದ್ದಿತು. ಆದ ಕಾರಣ ರಾಜ್ಯದಲ್ಲಿ ಬೇರೆ ಯಾವ ಶಿಕ್ಷಕ ಸಂಘಟನೆಯೂ ಈ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ.

ಶ್ರೀ ಆನಂದರಾಯರು 1969ರಲ್ಲಿ ಮೈಸೂರು, ಮಂಗಳೂರು, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗ, ತುಮಕೂರು ಈ ಜಿಲ್ಲೆಗಳನ್ನು ಒಳಗೊಂಡ ಮೈಸೂರು ಶಿಕ್ಷಕ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಹಿರಿಯರ ಸಲಹೆಯಂತೆ ಸ್ಪರ್ಧಿಸಿ, ಆಯ್ಕೆಯಾದರು. ನಂತರ ಶಿಕ್ಷಕರ ಪರವಾಗಿ ಅವರ ಸಾಮೂಹಿಕ ಸಮಸ್ಯೆಗಳನ್ನು ಪರಿಷತ್ತಿನಲ್ಲಿ ಎತ್ತಿ ಬಗೆಹರಿಸಬೇಕೆಂದು ದಿಟ್ಟತನದ ಹೋರಾಟ ಪ್ರಾರಂಭಿಸಿದರು. ಆಗ ಎಸ್.ಎಸ್.ಎಲ್.ಸಿ ಪರೀಕ್ಷೆ ಮೌಲ್ಯಮಾಪಕರ ಭತ್ಯೆ ಬಹಳ ಕಡಿಮೆ ಇತ್ತು. ಇದನ್ನು ಹೆಚ್ಚಿಸಬೇಕೆಂದು ಮೊದಲು ಈ ಸಮಸ್ಯೆ ತೆಗೆದುಕೊಂಡು, ನ್ಯಾಷನಲ್ ಹೈಸ್ಕೂಲು ಮೈದಾನದಲ್ಲಿ ಸಾವಿರಾರು ಮೌಲ್ಯಮಾಪಕರನ್ನು ಸೇರಿಸಿ ಬಹಳ ಯಶಸ್ವೀ ಹೋರಾಟ ನಡೆಸಿದರು. ಆಗ ಎಲ್ಲ ಶಿಕ್ಷಕರಿಗೂ ತಾವು ಸಂಘಟಿತರಾಗಬಹುದು, ಹೋರಾಟ ನಡೆಸಬಹುದು ಎಂಬ ಆತ್ಮವಿಶ್ವಾಸ ಮೊದಲ ಬಾರಿಗೆ ಬರುವಂತೆ ಶಿಕ್ಷಕರ ಮನೋಬಲವನ್ನು ಹೆಚ್ಚಿಸಿದರು. ಆಗ ಮಂಡ್ಯದ ಪ್ರಸಿದ್ಧರಾದ ಶ್ರೀ ಶಂಕರೇಗೌಡರು ಶಿಕ್ಷಣ ಮಂತ್ರಿಗಳಾಗಿದ್ದರು. ಅವರಿಗೆ ಮಳ್ಳೂರು ಆನಂದರಾಯರ ಬಗ್ಗೆ ಸ್ನೇಹ ಮತ್ತು ಗೌರವಗಳು ಅಪಾರವಾಗಿ ಇತ್ತು. ಮೊದಲ ಚಳುವಳಿ ಪೂರ್ಣ ಯಶಸ್ವಿಯಾಯಿತು. ನಂತರ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಯ ಪ್ರಮುಖರು ಶಿಕ್ಷಕರನ್ನು ಬಹಳ ಕೆಟ್ಟ ರೀತಿ ಶೋಷಿಸುತ್ತಿದ್ದುದರ ವಿರುದ್ಧ ಸದನದಲ್ಲಿ ಮತ್ತು ಹೊರಗೆ ದೊಡ್ಡ ಹೋರಾಟವನ್ನೇ ನಡೆಸಿದರು.

ಶ್ರೀ ಆನಂದರಾಯರಲ್ಲಿ ಭಾಷಣದ ಕಲೆ, ವಿಷಯಗಳನ್ನು ಸ್ಫುಟವಾಗಿ ಮಾತನಾಡುವ, ವಿವರಿಸುವ ಸಾಮರ್ಥ್ಯ ಇದ್ದುದರಿಂದ ವಿಧಾನ ಪರಿಷತ್ತಿನಲ್ಲಿ ಬಹಳ ಬೇಗ ಹೋರಾಟಗಾರ ಹಾಗೂ ಭಾಷಣಕಾರ, ಸಂಘಟಕ ಎಂದು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ವಿಧಾನ ಪರಿಷತ್ತಿನಲ್ಲಿ ಭಾಷಣಕ್ಕೆ ನಿಂತರೆ ವಿಧಾನಸೌಧವೇ ನಡುಗುವಂತಿತ್ತು ಎಂದು ಅನೇಕರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಒಟ್ಟಿನಲ್ಲಿ ಶಿಕ್ಷಕರ ಅನೇಕ ಸಾಮೂಹಿಕ ಸಮಸ್ಯೆಗಳಿಗೆ ಪರಿಹಾರ ಇವರ ಕಾಲದಲ್ಲಿ ಲಭಿಸಲು ಪ್ರಾರಂಭವಾಯಿತು. ಇವರು ವಿಧಾನ ಪರಿಷತ್ ಸದಸ್ಯರಾಗುವುದಕ್ಕೆ ಮುಂಚೆ ಚೆನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ಗೌರವ ಪ್ರಾಂಶುಪಾಲರಾಗಿಯೂ ಕೆಲಸ ನಿರ್ವಹಿಸಿದ್ದರು.

ಮೈಸೂರು ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಕರ್ನಾಟಕ ಏಕೀಕರಣದ ನಂತರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವಾಗಿ ಹೆಸರು ಬದಲಾವಣೆ ಹೊಂದಿತು. ಅಖಿಲ ಭಾರತ ಮಾಧ್ಯಮಿಕ ಶಿಕ್ಷಕ ಮಹಾಸಂಘ (AISTF) ನೊಡನೆ KRMSS ಸಂಲಗ್ನವಾಗಿ ಕೆಲಸವನ್ನು ಇವರ ಕಾಲದಲ್ಲೇ ಪ್ರಾರಂಭಿಸಲಾಯಿತು. A.I.S.T.F. ನಲ್ಲಿ ಎಡಪಂಥೀಯರು, ಕಾಂಗ್ರೆಸ್ಸಿಗರೂ, ಸೋಷಿಯಲಿಷ್ಟರು ಈ ರೀತಿ ಮನೋಭಾವದವರೆಲ್ಲರೂ ಇದ್ದುದರಿಂದ A.I.S.T.F. ನ ಎಲ್ಲ ಸಭೆಗಳನಲ್ಲೂ ಪರಸ್ಪರ ನಿಂದನೆ, ವಾದಗಳು ಇತ್ಯಾದಿ ಸದಾ ಮುಂದುವರೆದಿತ್ತು. ಕೆಲವು ಬಾರಿ ಹೊಡೆದಾಟದ ಮಟ್ಟಕ್ಕೂ ಹೋಗಿತ್ತು. ಆದರೆ ಮಳ್ಳೂರು ಆನಂದರಾಯರು ಮತ್ತು ಕುಲಕರ್ಣಿಯವರು ಎಲ್ಲವನ್ನೂ ಯಶಸ್ವಿಯಾಗಿ ನಿಭಾಯಿಸುತ್ತಿದ್ದರು (ಕೊನೆಗೆ ರಾಷ್ಟ್ರೀಯ ಮಾನಸಿಕತೆಯ ಎಲ್ಲರ ಪ್ರಯತ್ನದಿಂದ ರಾಷ್ಟ್ರೀಯ ಶಿಕ್ಷಕರು ಚುನಾವಣೆಯಲ್ಲಿ ಜಯಶೀಲರಾಗಿ ಮಿಕ್ಕವರನ್ನು ಸ್ತಬ್ಧ ಮಾಡಿದರು). ಶ್ರೀ ಮಳ್ಳೂರು ಆನಂದರಾಯರು ತುರ್ತುಪರಿಸ್ಥಿತಿಯಲ್ಲಿ ಬಂಧಿತರಾಗಿದ್ದರು. ತುರ್ತುಪರಿಸ್ಥಿತಿಯ ನಂತರ ಇವರು ಬೆಂಗಳೂರು ರಾಜಾಜಿನಗರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ರಾಜಕೀಯ ಪ್ರವೇಶಿಸಿದರು ನಂತರ ಶಿಕ್ಷಕ ಸಂಘದ ಜವಾಬ್ದಾರಿಯಿಂದ ಮುಕ್ತರಾದರು.

ಒಟ್ಟಿನಲ್ಲಿ ಶಿಕ್ಷಕರ ಕ್ಷೇತ್ರಕ್ಕೆ ಮಳ್ಳೂರು ಆನಂದರಾಯರ ಕೊಡುಗೆ ಅಪಾರ. ಶಿಕ್ಷಕರು, ಶಿಕ್ಷಕ ಸಂಘಟನೆಗಳು ಎಲ್ಲರೂ ಕರ್ನಾಟಕದಲ್ಲಿ ಶಿಕ್ಷಕರನ್ನಾಗಿ ಗುರುತಿಸುವ ಮಟ್ಟಕ್ಕೆ ತಂದ ಮಳ್ಳೂರರ ಬಗ್ಗೆ ಕೃತಜ್ಞತೆಯಿಂದ ಇರಬೇಕು. ಶ್ರೀ ಮಳ್ಳೂರರು ಅಚ್ಚಳಿಯದ ಒಂದು ದಿಟ್ಟ ಶಕ್ತಿಯಾಗಿದ್ದರು ಎಂದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ದಿನಾಂಕ 2–10–1935ರಲ್ಲಿ ಜನಿಸಿದ ಶ್ರೀಯುತರು, ದಿನಾಂಕ 14.2.2022 ರಂದು ನಮ್ಮನ್ನಗಲಿದ್ದಾರೆ.

ಹಿರಿಯ ಚೇತನಕ್ಕೆ ಸದ್ಗತಿ ಸಿಗಲೆಂದು ನಮ್ಮೆಲ್ಲ ಶಿಕ್ಷಕರು, ಜೊತೆಗಾರ ಕಾರ್ಯಕರ್ತರು ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ದೇವರಲ್ಲಿ ಪ್ರಾರ್ಥಿಸುತ್ತದೆ. ●

# ಪರೀಕ್ಷೆ – ಸಿದ್ಧತೆಯ ಸೂತ್ರ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಯಾವುದೇ ಪರೀಕ್ಷೆ ವಿದ್ಯಾರ್ಥಿ ಜೀವನದಲ್ಲಿ ಬಹಳ ಮುಖ್ಯವಾದ ಹಂತ. ನಮ್ಮ ಮುಂದಿನ ವಿದ್ಯಾಭ್ಯಾಸ, ಹಿಂದಿನ ಪರೀಕ್ಷೆಯಲ್ಲಿ ನಾವು ಗಳಿಸಿದ ಅಂಕಗಳ ಆಧಾರದ ಮೇಲೆಯೇ ನಿಂತಿರುವುದು. ಈಗಂತೂ ಸ್ಪರ್ಧಾ ಪ್ರಪಂಚ. ಕೇವಲ 'ಎ' ಶ್ರೇಣಿ ಸಾಲದು, ಎ+ ಎ++ ನಮ್ಮ ಗುರಿ. ಅಂದ್ಮೇಲೆ ನಮ್ಮ ತಯಾರಿಯೂ ಅದಕ್ಕನುಗುಣವಾಗೇ ಇರಬೇಕಲ್ಲವೇ? ನಿಮ್ಮ ಗುರಿ ಸೇರಲು ನಿಮಗೊಂದಿಷ್ಟು ಸಲಹೆ ಸೂಚನೆಗಳು ಇಲ್ಲಿವೆ. ಇದನ್ನು ನೀವು ಪಾಲಿಸಿದಲ್ಲಿ ನಿಮಗೆ ಯಶಸ್ಸು ನಿಶ್ಚಿತ.

ಇಂಗ್ಲೀಷ್‌ನಲ್ಲಿ ಮಾತೊಂದಿದೆ "ದೇರ್ ಇಸ್ ನೋ ಶಾರ್ಟ್‌ಕಟ್ ಟು ಸಕ್ಸಸ್. ಶಾರ್ಟ್‌ಕಟ್ಸ್, ಕಟ್ ಶಾರ್ಟ್ ದಿ ಸಕ್ಸಸ್".

## ಪರೀಕ್ಷೆಯನ್ನು ದ್ವೇಷಿಸದಿರಿ ಅಥವಾ ಭಯಪಡದಿರಿ

ಕೆಲವು ವಿದ್ಯಾರ್ಥಿಗಳು ಚೆನ್ನಾಗಿ ಓದುತ್ತಾರೆ, ಆದರೂ ಪರೀಕ್ಷೆಯಲ್ಲಿ ಕಡಿಮೆ ಅಂಕಗಳಿಸುತ್ತಾರೆ. ಇದಕ್ಕೆ ಕಾರಣ ಅವರಿಗಿರುವ ಪರೀಕ್ಷಾ ಭಯ. ಕೆಲವರಂತೂ ಪ್ರಶ್ನಪತ್ರಿಕೆ ಉತ್ತರಿಸುವಾಗ ವಿಪರೀತ ಬೆವರುವುದು, ನೀರು ಕುಡಿಯುವುದು, ಟೈಂ ಎಷ್ಟೆಂದು ಪದೇ ಪದೇ ಕೇಳುವುದು ಮುಂತಾದವನ್ನು ಮಾಡುತ್ತಾರೆ. ಇದಕ್ಕೆ ಭಯವೇ ಕಾರಣ. ಆದ್ದರಿಂದ ಓದಲು ಪ್ರಾರಂಭಿಸುವ ಮುನ್ನ ಆತ್ಮವಿಶ್ವಾಸದಿಂದ ಓದಿರಿ. ನಿಮ್ಮ ಆತ್ಮವಿಶ್ವಾಸ ಹೆಚ್ಚಿದಷ್ಟೂ ಪರೀಕ್ಷಾ ಭಯ ದೂರವಾಗುವುದು. ಯಶಸ್ಸಿನ ಮೊದಲ ಹಂತವೇ ಆತ್ಮವಿಶ್ವಾಸ.

## ಓದಲೊಂದು ಜಾಗ

ಮನೆಯಲ್ಲಿ ಓದಲೊಂದು ಅನುಕೂಲಕರ ಜಾಗ ಹುಡುಕಿ. ಟಿ.ವಿ ಮುಂದೆ ಕೂತು ಓದದಿರಿ. ಅಡುಗೆಮನೆ ಹತ್ತಿರವಂತೂ ಬೇಡವೇ ಬೇಡ. ನೀವು ಆರಿಸುವ ಜಾಗ ನಿಮ್ಮ ಏಕಾಗ್ರತೆಗೆ ಭಂಗ ತರಬಾರದು. ನೀವು ಓದುವ ಸಮಯವೂ ಬಹಳ ಮುಖ್ಯ. ಬೆಳಗಿನ ಜಾವದ ಓದು ಮನಸ್ಸಿಗೆ ನಾಟುತ್ತದೆ. ನಿಶ್ಶಬ್ಧ ವಾತಾವರಣದಲ್ಲಿ ಏಕಾಗ್ರತೆ ಅಧಿಕ. ಪೂರ್ವದಿಕ್ಕಿಗೆ ಮುಖ ಮಾಡಿ. ನಿಮ್ಮ ಅಂಕ ಗಳಿಕೆ ಜಾಸ್ತಿ ಆದೀತು! (ಸೂರ್ಯ ರಶ್ಮಿಯಿಂದ ತೂಕಡಿಕೆ ಕಡಿಮೆಯಾಗುತ್ತದಲ್ಲವೇ?)

## ಕೂರುವ ಭಂಗಿ

ಇದೇನು ವಿಚಿತ್ರ ಸಲಹೆ ಎಂದು ಭಾವಿಸದಿರಿ. ಏಕಾಗ್ರತೆಗೆ ನೀವು ಕೂರುವ ಭಂಗಿಯೂ ಅತಿಮುಖ್ಯ. ಹಾಸಿಗೆಗೆ ಒರಗಿ, ಈಸೀ ಚೇರ್‌ನಲ್ಲಿ ಕೂತು ಓದದಿರಿ. ನಿಮ್ಮ ಬೆನ್ನ ಮೂಳೆ ನೆಟ್ಟಗಿರಲಿ. ಕಾಲನ್ನು ಒಂದು ಮಣೆಯ ಮೇಲಿಡಿ. ನೆಲದ ಮೇಲಿಟ್ಟಲ್ಲಿ ನಿದ್ದೆ ಬಂದೀತು! ಪುಸ್ತಕದ ಮೇಲೆ ಸಾಕಷ್ಟು ಬೆಳಕು ಬೀಳುತ್ತಿರಲಿ. ಮಂದ ಬೆಳಕು ನಿದ್ದೆಗೆ ಆಹ್ವಾನ.

## ಟಿಪ್ಪಣಿ ಮಾಡಿಕೊಳ್ಳಿರಿ

ಟಿಪ್ಪಣಿ ಮಾಡುವುದು ಬಹಳ ಮುಖ್ಯವಾದ ಅಂಶ. ಓದುವಾಗ ಒಂದು ಪುಸ್ತಕ ಪೆನ್ನು ಜತೆಗಿರಲಿ. ನೀವು ಓದಿದ ವಿವರಗಳನ್ನೆಲ್ಲಾ ಸಣ್ಣ ಸಣ್ಣ ಅಂಶಗಳಾಗಿ ಗುರುತು ಮಾಡಿಕೊಳ್ಳಿ. ನೀವು ಮತ್ತೆ ಓದಿದಾಗ (ರಿವಿಷನ್) ಇದು ನಿಮ್ಮ ಉಪಯೋಗಕ್ಕೆ ಬಂದೀತು. ಪಠ್ಯಪುಸ್ತಕ ಅಥವಾ ನೋಟ್ಸ್ ಓದಲು ಸಮಯವಿಲ್ಲದಾಗ ಈ ಮುಖ್ಯಾಂಶಗಳನ್ನು ಮಾತ್ರ ಓದಿದರೆ ಸಾಕು.

## ಆರೋಗ್ಯದತ್ತ ಗಮನ ಕೊಡಿ

ಪರೀಕ್ಷೆ ಎಷ್ಟು ಮುಖ್ಯವೋ, ಅದಕ್ಕಿಂತ ಮುಖ್ಯ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು. ಹಿಂದಿನ ರಾತ್ರಿ ನಿದ್ದೆಗೆಟ್ಟು ಓದಿ ಮರುದಿನ ಪರೀಕ್ಷಾ ಕೊಠಡಿಯಲ್ಲಿ ನಿದ್ದೆ ಮಾಡಿದ, ವಾಂತಿ ಮಾಡಿದ ವಿದ್ಯಾರ್ಥಿಗಳನ್ನು ಕಂಡಿದ್ದೇನೆ. ಆದ್ದರಿಂದ ನಿಮಗೆ 6 ಗಂಟೆ ನಿದ್ದೆ ತುಂಬಾ ಅಗತ್ಯವಿದೆ. ಪರೀಕ್ಷೆಯ ಹಿಂದಿನ ದಿನವಂತೂ ಶಾಂತಚಿತ್ತರಾಗಿ ನಿದ್ರಿಸಿ. ಇದೇ ರೀತಿ ಆಹಾರದ ಕಡೆಗೂ ಗಮನ ಕೊಡುವುದು ಅಗತ್ಯ. ಪೌಷ್ಟಿಕವಾದ ಆಹಾರ ಸೇವಿಸಿ. ಹಾದಿಬೀದಿಯ ತಿಂಡಿ ತಿನಿಸನ್ನು ತಿನ್ನಬೇಡಿರಿ. ರಾತ್ರಿ ಮಲಗುವ ಮುನ್ನ ಒಂದು ಲೋಟ ನೀರು ಕುಡಿಯಲು ಮರೆಯಬೇಡಿ. ಇದು ನಿಮ್ಮ ಮಿದುಳಿನ ಜೀವಕೋಶಗಳನ್ನು ಉತ್ತೇಜಿಸುತ್ತದೆ.

## ಪರೀಕ್ಷೆ ದಿನ

ಪರೀಕ್ಷೆಯ ಹಿಂದಿನ ದಿನವೇ ಬರೆಯಲು ಅಗತ್ಯವಿರುವ ಪೆನ್ನು, ಪೆನ್ಸಿಲ್, ರಬ್ಬರ್, ಸಲಕರಣೆಗಳ ಬಾಕ್ಸ್, ಹಾಲ್ ಟಿಕೆಟ್ ಮುಂತಾದವನ್ನು ವ್ಯವಸ್ಥಿತವಾಗಿ ಜೋಡಿಸಿಕೊಳ್ಳಿರಿ. ಅಂದು ಬೇಗ ಮಲಗಿ, ಬೇಗ ಏಳಿರಿ. ನಿಮ್ಮ ಟಿಪ್ಪಣಿ ಪುಸ್ತಕವನ್ನೊಮ್ಮೆ ಓದಿ ಮನನ ಮಾಡಿರಿ. ಸಾಕಷ್ಟು ಮುಂಚೆಯೇ ಪರೀಕ್ಷಾ ಕೇಂದ್ರವನ್ನು ತಲುಪಿರಿ(ಕನಿಷ್ಠ ಅರ್ಧಗಂಟೆ ಮುನ್ನ) ನಿಮ್ಮ ಸೀಟ್ ನಂಬರ್, ಕೊಠಡಿ ಕ್ರಮಾಂಕ ಮೊದಲಾದವನ್ನು ತಿಳಿದುಕೊಳ್ಳಿರಿ. ತಡವಾಗಿ ಹೋದರೆ ಗಾಬರಿಯಾಗುತ್ತದೆ. ಇದರಿಂದ ನಿಮ್ಮ ಮಾನಸಿಕ ಸಂತುಲನ ತಪ್ಪಿ ಉತ್ತರ ಬರೆಯುವುದರ ಮೇಲೆ ಪರಿಣಾಮವಾಗುತ್ತದೆ; ಎಚ್ಚರ.

## ಪರೀಕ್ಷಾ ಕೊಠಡಿಯಲ್ಲಿ

ಉತ್ತರ ಪತ್ರಿಕೆಯಲ್ಲಿ ನೀಡಬೇಕಾದ ಎಲ್ಲ ಮಾಹಿತಿಯನ್ನೂ ಚಿತ್ತಿಲ್ಲದೆ ಭರ್ತಿ ಮಾಡಿ. ನಿಮ್ಮ ಹಾಲ್ ಟಿಕೆಟ್ ಕ್ರಮಾಂಕವನ್ನು ಸ್ಪಷ್ಟವಾಗಿ ನಮೂದಿಸಿ. ಪ್ರಶ್ನೆ ಪತ್ರಿಕೆ ಕೈಗೆ ಬಂದ ಕೂಡಲೇ ಅದನ್ನೊಮ್ಮೆ ಅವಲೋಕಿಸಿ. ಕೆಲವೊಮ್ಮೆ ಕೊನೇ ಪುಟ ಮುದ್ರಿತವಾಗದಿರುವ ಸಂಭವವಿರುತ್ತದೆ. ನಿಮ್ಮ ಬರೆಯುವ ಸಲಕರಣೆಗಳನ್ನು ಬೆಂಚಿನ ಮೇಲೆ ಜೋಡಿಸಿಕೊಳ್ಳಿರಿ.

## ಉತ್ತರಿಸುವ ಮುನ್ನ

ನಿಮಗೆ ಚೆನ್ನಾಗಿ ಅರ್ಥವಾಗಿರುವ, ವಿಶ್ವಾಸದಿಂದ ಉತ್ತರಿಸಬಲ್ಲ ಪ್ರಶ್ನೆಗಳನ್ನು ಮೊದಲು ಉತ್ತರಿಸಿ. ಪ್ರಶ್ನೆಗಳನ್ನು ಅದೇ ಕ್ರಮದಲ್ಲಿ ಉತ್ತರಿಸಬೇಕಾದ ಅಗತ್ಯವಿಲ್ಲ. ನೀವು ಉತ್ತರಿಸುವ ಕ್ರಮ ಅತಿಮುಖ್ಯ. ಅದು ನಿಮ್ಮ ಅಂಕಗಳಿಕೆಯ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ನೀವು ಎಷ್ಟೇ ಓದಿರಬಹುದು, ಆದರೆ ಅದನ್ನು ಹೇಗೆ ನಿರೂಪಿಸುವಿರಿ ಎಂಬುದು ಮುಖ್ಯ. ಅಗತ್ಯಕ್ಕಿಂತ ಉದ್ದವಾದ ಉತ್ತರವನ್ನು ಬರೆಯದಿರಿ. ನಿಮಗೆ ಉತ್ತರ ತಿಳಿಯದ್ದನ್ನು ಬರೆಯದಿರಿ. ಮೌಲ್ಯಮಾಪಕ ದಿನಕ್ಕೆ 20–25 ಉತ್ತರ ಪತ್ರಿಕೆ ತಿದ್ದ ಬೇಕಾಗುತ್ತದೆ. ಅವರು ಉತ್ತರದ ಮುಖ್ಯವಾದ ಅಂಶಗಳನ್ನು ಮಾತ್ರ ಹುಡುಕುತ್ತಾರೆ. ಆದ್ದರಿಂದ ಉತ್ತರಗಳನ್ನು ಅಂಶಗಳ ರೂಪದಲ್ಲೇ ಉತ್ತರಿಸಿ.

ನಿಮ್ಮ ಕೈಬರಹ ಓದುವಂತಿರಲಿ. ಚಿಕ್ಕದಾಗಿ ಚೊಕ್ಕವಾಗಿ ಉತ್ತರಿಸಿ. 'ಫಸ್ಟ್ ಇಂಪ್ರೆಷನ್ ಈಸ್ ದಿ ಬೆಸ್ಟ್ ಇಂಪ್ರೆಷನ್' ಎಂಬಂತೆ ನಿಮ್ಮ ಪ್ರಾರಂಭದ ಉತ್ತರಗಳು ಬೆಸ್ಟ್ ಆಗಿರಲಿ. ಅದರಿಂದ ಪರೀಕ್ಷನ ಮನಸ್ಸು ಗೆಲ್ಲುವಿರಿ.

**ಪುಟ 8 ಕ್ಕೆ ➢**

**ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ. – ಅಕ್ಕಮಹಾದೇವಿ**

# NEP–2020 ಶಿಕ್ಷಕರ ಶಿಕ್ಷಣಕ್ಕೆ ಭಾರಿ ಬದಲಾವಣೆ ತರಬಯಸುವುದೆ?

**ಚಿದಾನಂದ ಆ ಕೇ ಪಾಟೀಲ್**
**ಪ್ರಧಾನ ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಸದಸ್ಯರು, ಎನ್.ಇ.ಪಿ2020**
**ಅನುಷ್ಠಾನ ಸಮಿತಿ(ಶಾಲಾ ಶಿಕ್ಷಣ),**
**ಕರ್ನಾಟಕ ಸರ್ಕಾರ, ಕರ್ನಾಟಕ**



ಆತ್ಮೀಯರೇ,

ವಿಷಯಕ್ಕೆ ಹೋಗುವುದಕ್ಕಿಂತಲೂ ಮೊದಲು ಕಳೆದ ಸಂಚಿಕೆಯಲ್ಲಿ SEZ (ಸಾಮಾಜಿಕ ಮತ್ತು ಆರ್ಥಿಕ ವಲಯದ) ಬಗ್ಗೆ ಬರೆದ ಲೇಖನಕ್ಕೆ ಓದುಗರು ಅನೇಕ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುವಿರಿ. ತಾವೆಲ್ಲ ಅಭಿಪ್ರಾಯಗಳನ್ನು ತಿಳಿಸಿರುವುದಕ್ಕೆ ಧನ್ಯವಾದಗಳು ಮತ್ತು ಈ ಲೇಖನಕ್ಕೂ ತಮ್ಮ ಅಭಿಪ್ರಾಯಗಳನ್ನು ಅಪೇಕ್ಷಿಸಬಹುದೆ?

ನಮಗೆಲ್ಲ ತಿಳಿದಿರುವಂತೆ ಒಂದು ದೇಶದ ಭವಿಷ್ಯ ಶಾಲೆಗಳ ಕೋಣೆಗಳಲ್ಲಿ ನಿರ್ಧಾರವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುವವರು ಶಿಕ್ಷಕರು. ಅದಕ್ಕಾಗಿಯೇ ಸಮಾಜದಲ್ಲಿ ಇಂದಿಗೂ ಶಿಕ್ಷಕರಿಗೆ ವಿಶೇಷ ಸ್ಥಾನಮಾನವಿದೆ. ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತೊಡಗುವ ಶಿಕ್ಷಕರನ್ನು ತಯಾರಿಸುವ ಶಿಕ್ಷಣ ಹೇಗಿರಬೇಕು ಎನ್ನುವುದರ ಬಗ್ಗೆ NEP–2020 ಯಲ್ಲಿ ಸವಿಸ್ತಾರವಾಗಿ ವಿವರಿಸಿದೆ ಮತ್ತು ಅನೇಕ ಬದಲಾವಣೆಯ ಅಂಶಗಳನ್ನು ಸೂಚಿಸಿದೆ. ಸಮಾಜದಲ್ಲಿ ಶಿಕ್ಷಕರು ಇತ್ತೀಚಿನ ಅನೇಕ ಅಂಶಗಳ ಪರಿಣಾಮದಿಂದಾಗಿ ಗುಣಮಟ್ಟ ಮತ್ತು ಪ್ರೇರಣೆಯ ಅಪೇಕ್ಷಿತ ಮಾನದಂಡಗಳನ್ನು ತಲುಪುತ್ತಿಲ್ಲ ಎನ್ನುವ ಕಳವಳದ ಜೊತೆಯಲ್ಲಿ ಮಕ್ಕಳ ಮತ್ತು ರಾಷ್ಟ್ರದ ಉತ್ತಮ ಭವಿಷ್ಯದ ದೃಷ್ಟಿಯಿಂದ ಶಿಕ್ಷಕರ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಗೆ ಒತ್ತುನೀಡಿದೆ.

## ಶಿಕ್ಷಕರ ಶಿಕ್ಷಣ:

ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಬಹುವಿಷಯದತ್ತ ಸಾಗುತ್ತಿರುವುದರಿಂದಾಗಿ 2030ರ ಹೊತ್ತಿಗೆ ಶಿಕ್ಷಕರ ಶಿಕ್ಷಣವನ್ನು ಸಹ ಬಹುವಿಷಯದ (Multi disciplinary) ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ಸ್ಥಳಾಂತರವಾಗಬೇಕು. ಇಲ್ಲಿ

- ನಾಲ್ಕು ವರ್ಷಗಳ ಪದವಿ ಸಂಯೋಜಿತ ಬಿ.ಇಡಿ ಪದವಿಯಲ್ಲಿ ವಿವಿಧ ಪ್ರಕಾರದ ಜ್ಞಾನ ಕಲಿಸಲಾಗುತ್ತದೆ ಹಾಗು ಸ್ಥಳೀಯ ಶಾಲೆಗಳಲ್ಲಿ ಬೋಧನೆಯ ಅಭ್ಯಾಸ ತರಬೇತಿಯನ್ನು ನೀಡಲಾಗುತ್ತದೆ.
- ನಾಲ್ಕು ವರ್ಷಗಳ ಸಂಯೋಜಿತ ಬಿ.ಇಡಿ ನೀಡಿ, ಕಾಲೇಜುಗಳಲ್ಲಿಯೇ ಈಗಾಗಲೇ ಪದವಿ ಪಡೆದವರಿಗಾಗಿ 2 ವರ್ಷಗಳ ಬಿ.ಇಡಿಯನ್ನು ನಡೆಸಲಾಗುವುದು.
- ನಾಲ್ಕು ವರ್ಷಗಳ ಪದವಿಗೆ ಸಮಾನವಾದ ಪದವಿ ಪೂರ್ಣಗೊಳಿಸಿದವರಿಗಾಗಿ ಅಥವಾ ಸ್ನಾತಕೋತ್ತರ ಪದವಿ ಪಡೆದವರಿಗಾಗಿ ಮತ್ತು ವಿಶೇಷ ವಿಷಯದಲ್ಲಿ ವಿಷಯ ಶಿಕ್ಷಕರಾಗಲು ಬಯಸುವವರಿಗೆ ಒಂದು ವರ್ಷದ ಬಿ.ಇಡ್ ಕಾರ್ಯಕ್ರಮವನ್ನು ಪ್ರಾರಂಭಿಸಲು ಅವಕಾಶ ನೀಡಿದೆ.

## ನೇಮಕಾತಿ :

ಶಾಲಾ ಶಿಕ್ಷಣದ ಎಲ್ಲ ಹಂತಗಳ ಶಿಕ್ಷಕರ ನೇಮಕಾತಿಗಾಗಿ TET ಅಥವಾ NTA ಯನ್ನು ವಿಸ್ತರಿಸುವುದು. ಶಾಲೆಗಳು ಮತ್ತು ಶಾಲಾ ಸಂಕೀರ್ಣಗಳಲ್ಲಿ ಶಿಕ್ಷಕರ ನೇಮಕ ಪ್ರಕ್ರಿಯೆಯಲ್ಲಿ ಬೋಧನೆಯ ಕುರಿತು ತಿಳಿದುಕೊಳ್ಳಲು ಬೋಧನಾ ಪ್ರಾತ್ಯಕ್ಷಿತೆ ಅಥವಾ ಸಂದರ್ಶನ ವಿಧಾನ ಅನುಸರಿಸುವುದು ಮತ್ತು ಅಗತ್ಯವಿರುವ ಸ್ಥಳೀಯ ಭಾಷೆಯಲ್ಲಿ ಬೋಧನಾ ಸಾಮರ್ಥ್ಯ ಮತ್ತು ಪ್ರಾವಿಣ್ಯತೆಯನ್ನು ತಿಳಿಯಲು ಈ ಕ್ರಮ ಸಹಾಯಕವಾಗಿದೆ. ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿಗೂ ಈ ಕ್ರಮವನ್ನು ಅನುಸರಿಸುವುದು. ಕಲೆ, ದೈಹಿಕಶಿಕ್ಷಣ ಮತ್ತು ಭಾಷೆಗಳಂತಹ ವಿಷಯಗಳೂ ಸೇರಿದಂತೆ ಶಿಕ್ಷಕರನ್ನು ಶಾಲೆ ಅಥವಾ ಶಾಲಾ ಸಂಕೀರ್ಣಕ್ಕೆ ನೇಮಕ ಮಾಡುವುದು. ಸ್ಥಳೀಯ ಜ್ಞಾನ ಮತ್ತು ವೃತ್ತಿಗಳನ್ನು ಸಂರಕ್ಷಿಸಲು, ಸಾಂಪ್ರದಾಯಕ ಸ್ಥಳೀಯ ಕಲೆಗಳು, ವೃತ್ತಿಪರ ಕರಕೌಶಲ್ಯ, ಉದ್ಯಮಶೀಲತೆ, ಕೃಷಿ ಅಥವಾ ಸ್ಥಳೀಯ ಪರಿಣಿತಿ ಇರುವ ವ್ಯಕ್ತಿಗಳನ್ನು ಶಾಲೆಗಳಿಗೆ ಅಥವಾ ಶಾಲಾ ಸಂಕೀರ್ಣಕ್ಕೆ ಮಾಸ್ಟರ್ ಬೋಧಕರನ್ನಾಗಿ ನೇಮಿಸಿಕೊಳ್ಳುವುದು.

## ವೃತ್ತಿ ನಿರತ ಶಿಕ್ಷಕರಿಗೆ :

ಶಿಕ್ಷಕರಿಗೆ ಸ್ವ–ಸುಧಾರಣೆಗೆ ಮತ್ತು ಅವರ ವೃತ್ತಿಗಳಲ್ಲಿನ ಇತ್ತೀಚಿನ ಆವಿಷ್ಕಾರಗಳು ಮತ್ತು ಬೆಳವಣಿಗೆಗಳ ಕುರಿತು ಕಲಿಯಲು ನಿರಂತರ ಅವಕಾಶವನ್ನು ಒದಗಿಸಿಕೊಡುವುದು. ಅದಕ್ಕಾಗಿ ಶಿಕ್ಷಕರಿಗೆ ವೃತ್ತಿಪರ ಅಭಿವೃದ್ಧಿಗಾಗಿ CPD (Continuous professional Development) ಪ್ರತಿ ವರ್ಷ 50 ಗಂಟೆಗಳ ಕಾರ್ಯಕ್ರಮ ರೂಪಿಸುವುದು.

ಶಿಕ್ಷಕರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸುವುದಕ್ಕಾಗಿ ಅತ್ಯುತ್ತಮ ಕೆಲಸ ಮಾಡುವವರನ್ನು ಗುರುತಿಸಿ ಬಡ್ತಿ ನೀಡಬೇಕು ಮತ್ತು ಸಂಬಳ ಹೆಚ್ಚಳ ಮಾಡಬೇಕು. ಶಾಲಾ ಮುಖ್ಯಸ್ಥರಿಗೆ ನಾಯಕತ್ವ ಮತ್ತು ನಿರ್ವಹಣಾ ಕೌಶಲ್ಯಗಳನ್ನು ನಿರಂತರವಾಗಿ ಕಲಿಸುವುದಕ್ಕಾಗಿ ಕಾರ್ಯಗಾರಗಳನ್ನು ಯೋಜಿಸಬೇಕು. ಶಾಲಾ ಹಂತದ ಶಿಕ್ಷಕರನ್ನು ಹೆಚ್ಚು ಕಡಿಮೆ ಎಂದು ಪರಿಗಣಿಸದೆ ಎಲ್ಲರನ್ನು ಸಮಾನವಾಗಿ ಪರಿಗಣಿಸುವುದು ಹಾಗು ಅರ್ಹತೆಯ ಆಧಾರದ ಮೇಲೆ ಶಿಕ್ಷಕರ ಮೇಲ್ಮುಖ ಚಲನೆಗೆ ಅವಕಾಶ ಕಲ್ಪಿಸುವುದು.

- ಶಾಲಾ ಹಂತದಲ್ಲಿ ನಾಯಕತ್ವ ಮತ್ತು ನಿರ್ವಹಣಾ ಸ್ಥಾನದಂತಹ ಮತ್ತು ವಿಕಲಚೇತನ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ಬಯಸುವ ಅಥವಾ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಹೋಗ ಬಯಸುವ ಶಿಕ್ಷಕರಿಗೆ ಬಹುವಿಷಯಕ್ಕೆ ಬೋಧನಾ (Multi disciplinary) ಕಾಲೇಜುಗಳಲ್ಲಿ ಬಿ.ಎಡ್ ನಂತರದ ಪ್ರಮಾಣೀಕೃತ ಕೋರ್ಸ್‌ಗಳನ್ನು ಪ್ರಾರಂಭಿಸಬೇಕು.
- National Council for Teacher Education (NCTE) ಶಿಕ್ಷಕರ ಶಿಕ್ಷಣಕ್ಕಾಗಿ NEP–2020 ಆಧಾರದ ಮೇಲೆ NCFTE (National Curriculum Frame work for Teachers education) ನ್ನು ರೂಪಿಸಬೇಕು ಮತ್ತು 5 ರಿಂದ 10 ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು. ಕಳಪೆ ಗುಣಮಟ್ಟದ ಶಿಕ್ಷಕರ ಶಿಕ್ಷಣ ನೀಡುವ ಸಂಸ್ಥೆಗಳನ್ನು ಸ್ಥಗಿತಗೊಳಿಸಬೇಕು ಮತ್ತು ಅವುಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು.
- ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನಕಗಳ (National Professional Standards for Teachers) (NPST) ಸಾಮಾನ್ಯ ಮಾರ್ಗದರ್ಶಿಯನ್ನು GEC (General Education Council) ಅಡಿಯಲ್ಲಿ NCTE ಯು PSSP (Professional Standard

ಪುಟ 9 ಕ್ಕೆ ➢

# ಸ್ವಾತಂತ್ರ್ಯ ಹೋರಾಟ ಹಿನ್ನೋಟ, ಮುನ್ನೋಟ

**ಸ್ವಾತಂತ್ರ್ಯ ಅಮೃತೋತ್ಸವದ ಸಂದರ್ಭದಲ್ಲಿ ಈ ಘಟನೆಗಳು ಎಲ್ಲರ ಸ್ಮರಣೆಗೆ ಬರಬೇಕು ಎಂಬ ಉದ್ದೇಶದಿಂದ ಈ ಲೇಖನಮಾಲೆ ಈ ಪುಟಗಳು ಸು. ರಾಮಣ್ಣನವರ ಸ್ವಾತಂತ್ರ್ಯ ಹೋರಾಟ ಪುಸ್ತಕದ ಒಂದು ಭಾಗ. ಇದು 3-4 ಕಂತುಗಳು ಬರುತ್ತದೆ**

ಶ್ರೀ ಸು. ರಾಮಣ್ಣ

(ಹಿಂದಿನ ಸಂಚಿಕೆಯಿಂದ...)

## ಅ) ಖಿಲಾಫತ್ ಚಳುವಳಿಗೆ ಬೆಂಬಲ

ಮೊದಲ ವಿಶ್ವಯುದ್ಧದ ನಂತರ ಬ್ರಿಟಿಷರು ಟರ್ಕಿಯ ಅರಸನಾಗಿದ್ದ ಖಲೀಫನನ್ನು ಕೆಳಗಿಳಿಸಿ ಹಲವಾರು ರಾಜ್ಯಗಳಲ್ಲಿ ಟರ್ಕಿಯನ್ನು ಒಡೆದರು. ಖಲೀಫನನ್ನು ತಮ್ಮ ಧಾರ್ಮಿಕ ಮುಖಂಡನೆಂಬುದಾಗಿ ಭಾರತೀಯ ಮುಸಲ್ಮಾನರು ಪರಿಗಣಿಸಿದ್ದರು. ಇಂಥವನನ್ನು ಪದಚ್ಯುತ ಮಾಡಿದ ಇಂಗ್ಲೀಷರ ವಿರುದ್ಧ ಭಾರತದಲ್ಲಿ ಮುಸ್ಲಿಮರು ಖಿಲಾಫತ್ ಚಳುವಳಿಯನ್ನು ಹೂಡಿದರು. ಅಸಲಿಗೆ ಟರ್ಕಿಯ ಜನತೆಗೇ ಖಲೀಫ್ ಬೇಡವಾಗಿದ್ದ. ಆಧುನಿಕ ಮನೋಭಾವದ ಅತಾತ್‌ವುಲ್ಲಾ ಮುಸ್ತಫಾ ಕಮಾಲ್ ಪಾಷ, ಖಲೀಫನನ್ನು ಮೂಲೆಗೊತ್ತಿದ್ದನು. ಹೀಗಾದರೂ ಭಾರತಕ್ಕೆ ಯಾವ ಸಂಬಂಧವೂ ಇಲ್ಲದ ಖಿಲಾಫತ್ ಚಳುವಳಿಯನ್ನು ಮುಸ್ಲಿಮರು ಹೂಡಿದರು. ಇದಕ್ಕಿಂತ ದೌರ್ಭಾಗ್ಯಕರ ವಿಷಯವೆಂದರೆ ಈ ಚಳುವಳಿಯನ್ನು ಗಾಂಧೀಜಿ ಸಮರ್ಥಿಸಿದ್ದು. ಇದರಿಂದ ಸ್ವರಾಜ್ಯ ಚಳುವಳಿಗೆ ಮುಸ್ಲಿಮರ ಸಂಪೂರ್ಣ ಸಮರ್ಥನೆ ಸಿಗುತ್ತದೆಂಬ ಭ್ರಮೆಗೆ ಗಾಂಧೀಜಿ ಬಲಿಯಾದರು. ಮುಸ್ಲಿಮರ ದೇಶಬಾಹಿರ ನಿಷ್ಠೆಗೆ ಕೊಂಚವೂ ನ್ಯಾಯಸಮ್ಮತವಲ್ಲದ ಮತ್ತು ಮುಸ್ಲಿಂ ಪ್ರತ್ಯೇಕತೆಯನ್ನು ಪೋಷಿಸುವ ಈ ನಿಲುವು ಭಾರತಕ್ಕೆ ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸಿತು. ಓಲೈಸುವ ಅವಸರ ಎಷ್ಟಿತ್ತೆಂದರೆ 1921 ರ ಅಸಹಕಾರ ಚಳುವಳಿಯನ್ನು ಖಿಲಾಫತ್ ಆಂದೋಲನದ ಜೊತೆ ಸಮೀಕರಿಸಲಾಯಿತು. ಬ್ರಿಟಿಷರು ತಮ್ಮ ದಮನ ನೀತಿಯಿಂದ ಖಿಲಾಫತ್ ಚಳುವಳಿಯನ್ನು ಸಂಪೂರ್ಣವಾಗಿ ಹತ್ತಿಕ್ಕಿದರು. ಹತಾಶರಾಗಿ ಹೋದ ಮುಸ್ಲಿಮರು ತಮ್ಮ ಸಿಟ್ಟನ್ನು ತಮಗೇ ಸಮರ್ಥನೆ ಮಾಡಿದ್ದ ಹಿಂದುಗಳ ಮೇಲೆಯೇ ತೋರಿದ್ದು! ವಿಶೇಷವಾಗಿ ಕೇರಳದಲ್ಲಿ ಸಹಸ್ರಾರು ಅಮಾಯಕರ ಮೇಲೆ ಪೈಶಾಚಿಕ ಕೃತ್ಯವನ್ನು ಮೆರೆದರು. ಇದೇ ಮುಂದೆ ಕುಖ್ಯಾತ ಮೋಪ್ಲಾದಂಗೆ ಎಂದು ಹೆಸರಾಯಿತು. ಹಿಂದು ಮುಸ್ಲಿಂ ಏಕತೆಯ ಬಿಸಿಲ್ಗುದುರೆಯನ್ನು ಬೆಂಬತ್ತಿದ್ದ ಗಾಂಧೀಜಿ ಮುಸ್ಲಿಮರ ಈ ಕೃತಘ್ನತೆಯನ್ನು ಅಲಕ್ಷಿಸಿದ್ದು ದೇಶದ ದೌರ್ಭಾಗ್ಯವೇ ಸರಿ!

## ಆ) ವಂದೇಮಾತರಂ ಗೀತೆಗೆ ಅಪಚಾರ

1905ರಲ್ಲಿ ಆದ ಬಂಗಾಳ ವಿಭಜನೆಯ ದಿನಗಳಲ್ಲಿ ವಂದೇಮಾತರಂ ಗೀತೆಯು ಹಿಂದುಗಳ ಜೊತೆ ಮುಸಲ್ಮಾನರಲ್ಲೂ ರಾಷ್ಟ್ರಭಕ್ತಿಯನ್ನು ಅರಳಿಸುವ ಮೂಲಕ, ತನ್ನ ಅಂತಃಸತ್ವದಿಂದಲೇ ಒಂದು ರಾಷ್ಟ್ರಮಂತ್ರವಾಗಿ, ಸ್ವಾತಂತ್ರ್ಯ ಚಳುವಳಿಗೆ ಅಪಾರವಾದ ಚೈತನ್ಯವನ್ನು ತುಂಬಿತ್ತು. ಆದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ತುಷ್ಟೀಕರಣದ ನೀತಿಗೆ ಜಾರಿದ ಫಲವಾಗಿ ಮುಸ್ಲಿಂ ಪ್ರತ್ಯೇಕತೆಯು ಎಗ್ಗಿಲ್ಲದೆ ಬೆಳೆಯಿತು. ಮುಸ್ಲಿಂ ಮುಖಂಡರು ವಂದೇಮಾತರಂ ಗೀತೆಯಲ್ಲಿ ವಿಗ್ರಹಪೂಜೆಯ ಕಲ್ಪನೆ ಹಾಗೂ ಸಂಗೀತವಿದೆ ಈ ಎರಡೂ ನಮಗೆ ನಿಷಿದ್ಧ, ಆದ್ದರಿಂದ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ವಂದೇಮಾತರಂ ಹಾಡಬಾರದು ಎಂಬ ಹಟ ಹಿಡಿದರು. ದುರದೃಷ್ಟವಶಾತ್ ಹಿಂದು ಮುಸ್ಲಿಂ ಏಕತೆಯ ಮರೀಚಿಕೆಯನ್ನು ಬೆಂಬತ್ತಿದ್ದ ಕಾಂಗ್ರೆಸ್‌ಗೆ ವಂದೇಮಾತರಂ ಅಪಥ್ಯವಾಗಿ, ಮುಸ್ಲಿಮರನ್ನು ತೃಪ್ತಿಪಡಿಸಲು ವಂದೇ ಮಾತರಂ ಗೀತೆಯನ್ನು ವಿಭಜಿಸಲಾಯಿತು. ಮುಂದೆ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ವಂದೇಮಾತರಂನ ಪೂರ್ಣಪಾಠಕ್ಕೆ ತಿಲಾಂಜಲಿ ನೀಡಲಾಯಿತು.

ಎಂಥಾ ಅವನತಿ! ಬ್ರಿಟಿಷರು ತುಂಡು ಮಾಡಿದ್ದ ಬಂಗಾಳವನ್ನು ಒಗ್ಗೂಡಿಸಿದ್ದ ವಂದೇಮಾತರಂ, ನಮ್ಮವರಿಂದಲೇ ತುಂಡಾಯಿತು.

ಮುಸ್ಲಿಂ ತುಷ್ಟೀಕರಣವೆಂಬ ಇಳಿಜಾರಿನಲ್ಲಿ ಜಾರುತ್ತಾ, ಜಾರುತ್ತಾ ಹೋದ ಕಾಂಗ್ರೆಸ್ ನೇತೃತ್ವ, ಭಾರತದ ವಿಭಜನೆಯನ್ನು ಅನಿವಾರ್ಯವಾಗಿ ಒಪ್ಪಿಕೊಂಡುಬಿಟ್ಟಿತು.

(ಮುಂದುವರೆಯುವುದು...)

## ಮಾತು ಮಾಣಿಕ್ಯ

ಅಜ್ಞಾನ-ಆಲಸ್ಯಗಳಿಂದ ಆಗಾಗ ಜಡಗಟ್ಟುವ ಸಮಾಜ ವನ್ನು ಜಾಗೃತಗೊಳಿಸಿ, ಅಲ್ಲಿ ಸಂಸ್ಕೃತಿಯ ಜ್ಯೋತಿಯನ್ನು ಬೆಳಗಿಸಲು ಮಾತಿನ ಜ್ಯೋತಿರ್ಲಿಂಗವೇ ಬೇಕು !

ಮಾತಿನಿಂದ ಒಬ್ಬನನ್ನು ಕೊಲ್ಲಬಹುದೆಂಬುದು ನಿಜವಾದರೂ ಮಾತಿನಿಂದ ಜಗತ್ತನ್ನೇ ಗೆಲ್ಲಬಹುದೆಂಬ ಸತ್ಯವನ್ನು ಅಲ್ಲಗಳೆಯಲಾಗದು.

ಅಸಂಬದ್ಧವಾದ ಮಾತು ಹರಟೆ ಎನಿಸಿಕೊಳ್ಳುತ್ತದೆ. ಆದರೆ ಸುಸಂಬದ್ಧವಾದ ಹಾಗೂ ಸಾರವತ್ತಾದ ಮಾತೇ ವಾಣೀ ಸ್ವರೂಪಳಾದ ಶಾರದಾಮಾತೆ, ಜ್ಞಾನದಾತೆ ಎಂಬುದರಲ್ಲಿ ಎರಡು ಮಾತಿಲ್ಲ.

– ಸ್ವಾಮಿ ಪುರುಷೋತ್ತಮಾನಂದ

ಆತ್ಮಶ್ರದ್ಧೆ ಇಂದು ನನಗೆ ಬೇಕಾಗಿದೆ, ನಿಮಗೆಲ್ಲಾ ಬೇಕಾಗಿದೆ. ಇದನ್ನು ಪಡೆದುಕೊಳ್ಳುವ ಮಹಾ ಸಾಹಸ ನಿಮ್ಮ ಮುಂದೆ ಇದೆ. ಎಲ್ಲವನ್ನೂ ಹಾಸ್ಯ ಮಾಡುವ, ಹುಡುಗಾಟಿಕೆಯ ಸ್ವಭಾವ ನಮ್ಮ ಜನಾಂಗದ ಜೀವನದ ಮೇಲೆ ದಾಳಿ ಇಡುತ್ತಿದೆ. ಅದನ್ನು ತ್ಯಜಿಸಿ ಧೀರರಾಗಿ, ಶ್ರದ್ಧಾವಂತರಾಗಿ, ಉಳಿದುದೆಲ್ಲವೂ ಸ್ವಾಭಾವಿಕವಾಗಿಯೇ ಸಿದ್ಧಿಸುವುದು.

– ಸ್ವಾಮಿ ವಿವೇಕಾನಂದ

ಯಾರ ಕೃಪೆಯು ಮೂಖನನ್ನು ವಾಚಾಳಿಯನ್ನಾಗಿ ಮಾಡುವುದೋ, ಕುಂಟನು ಪರ್ವತವನ್ನು ಲಂಘಿಸುವಂತೆ ಮಾಡುವುದೋ ಅಂತಹ ಪರಮಾನಂದ ಸ್ವರೂಪನಾದ ಮಾಧವನನ್ನು ವಂದಿಸುತ್ತೇನೆ.

– ಭಗವದ್ಗೀತೆ

ಎಲ್ಲ ಎಲ್ಲವನರಿದು ಫಲವೇನು ತನ್ನ ತಾನರಿಯದನ್ನಕ್ಕ? – ಅಕ್ಕಮಹಾದೇವಿ

➢ ಪುಟ 5 ರಿಂದ.....

ಉತ್ತರಿಸುವಾಗ ಸಮಯದ ಹೊಂದಾಣಿಕೆ ಅತಿಮುಖ್ಯ. ಪರೀಕ್ಷೆಗೆ ಮೊದಲು ನೀವು 4–6 ಪತ್ರಿಕೆಗಳನ್ನು ಮನೆಯಲ್ಲಿ ಗಡಿಯಾರ ಇಟ್ಟುಕೊಂಡು ಉತ್ತರಿಸಿದ್ದರೆ, ಪರೀಕ್ಷೆಯಲ್ಲೂ ಸಮಯವನ್ನು ಹೊಂದಿಸುವ ಕಲೆ ಸಿದ್ಧಿಸುತ್ತದೆ. ಯಾವುದೇ ಪ್ರಶ್ನೆಯನ್ನೂ ಉತ್ತರ ತಿಳಿಯದೆಂದು ಬಿಡದಿರಿ. ಸ್ವಲ್ಪವಾದರೂ ಬರೆಯಿರಿ; ಗಣಿತ ಪತ್ರಿಕೆ ಉತ್ತರಿಸುವಾಗ ಸೂತ್ರ ಹಾಕಿದರೂ ಅರ್ಧ ಅಂಕ ಸಿಗುತ್ತದೆ. ಪಠ್ಯ ಹೊರತಾದ ಪ್ರಶ್ನೆ ಎಂದು ಬಿಡುವುದರಿಂದ ನಷ್ಟವೇ ಜಾಸ್ತಿ. ಆದರೆ ಕ್ರಮಸಂಖ್ಯೆ ಹಾಕಿದ್ದರೆ ಪೂರ್ತಿ ಅಂಕ ಸಿಗುತ್ತದೆ ಎಂಬುದು ನೆನಪಿರಲಿ.

## ದುರ್ವ್ಯವಹಾರ ಬೇಡ

ಪ್ರೀತಿಯ ವಿದ್ಯಾರ್ಥಿಗಳೇ ಪರೀಕ್ಷಾ ಕೊಠಡಿಯಲ್ಲಿ ದುರ್ವ್ಯವಹಾರ ಮಾಡದಿರಿ. ಕಾಪಿ ಮಾಡುವುದು ಮಹಾ ಪಾಪ. ಪರೀಕ್ಷನ ಕಣ್ತಪ್ಪಿಸಬಹುದು ಆದರೆ ನಿಮ್ಮ ಅಂತರಾತ್ಮನ ಕಣ್ತಪ್ಪಿಸಲಾರಿರಿ. ನಿಮಗೆ ಉತ್ತರ ತಿಳಿಯದಿದ್ದರೆ ಬರೆಯದಿರಿ. ಪರೀಕ್ಷೆ ಪಾಸಾಗುವುದೇ ಜೀವನದ ಗುರಿಯಲ್ಲ. ಮೌಲ್ಯಗಳನ್ನು ಜೀವನದಲ್ಲಿ ರೂಢಿಸಿಕೊಳ್ಳುವುದೇ ಜೀವನದ ಗುರಿ. ಕಾಪಿ ಮಾಡಿ ಸಿಕ್ಕಿ ಬಿದ್ದರೆ ಮಾನ– ಮಾರ್ಯಾದೆ ಹೋಗುತ್ತದೆ. ಜತೆಗೆ ವರ್ಷದ ನಷ್ಟವೂ ಆಗುತ್ತದೆ.

## ನಿಮ್ಮಲ್ಲಿ ಶ್ರದ್ಧೆ ಇರಲಿ, ದೇವರನ್ನೂ ನಂಬಿ

ಈ ಕೊನೆಯ ಅಂಶ ಅತಿ ಮುಖ್ಯ. ನಾನು ಗೆದ್ದೇ ಗೆಲ್ಲುವೆ ಎಂಬ ಆತ್ಮವಿಶ್ವಾಸ ಮೂಡಿಸಿಕೊಳ್ಳಿ. ನಿಮ್ಮ ಸಾಧನೆ ಬಗ್ಗೆ ನಿಮಗೆ ಶ್ರದ್ಧೆ ಇರಲಿ. ಪರೀಕ್ಷೆಗೆ ಮುನ್ನ ದೀರ್ಘ ಉಸಿರು ತೆಗೆದುಕೊಂಡು, ನಿಮ್ಮ ನೆಚ್ಚಿನ ದೇವರನ್ನು ಪ್ರಾರ್ಥಿಸಿ. ಪ್ರಾರ್ಥನೆ ನಿಮಗೆ ಶಕ್ತಿ, ಆತ್ಮಸ್ಥೈರ್ಯ ನೀಡುತ್ತದೆ. ಮನಸ್ಸನ್ನು ಶಾಂತಗೊಳಿಸುತ್ತದೆ. ಆಗ ಉತ್ತರಗಳು ಗಂಗಾನದಿಯಂತೆ ಹರಿಯತ್ತದೆ.

## ಅತಿ ಮುಖ್ಯ ಅಂಶ

ಪರೀಕ್ಷೆಯ ನಂತರ ನಿಮ್ಮ ಗೆಳೆಯರೊಡನೆ ಪ್ರಶ್ನೋತ್ತರವನ್ನು ಚರ್ಚಿಸದಿರಿ. ಅದರಿಂದ ನಿಮಗೆ ಏನೂ ಲಾಭವಿಲ್ಲ. ಬದಲಿಗೆ ನಿಮ್ಮ ಮನಸ್ಸನ್ನು ಕಂಗೆಡಿಸುತ್ತದೆ. ಪರೀಕ್ಷೆಯ ನಂತರ ಸೀದಾ ಮನೆಗೆ ಬಂದು ಮುಂದಿನ ಪತ್ರಿಕೆಗೆ ಸಿದ್ಧತೆ ಮಾಡಿರಿ.

ಮಕ್ಕಳೇ, ನಿಮ್ಮ ತಾಯಿ– ತಂದೆ ನಿಮ್ಮಿಂದ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿರುತ್ತಾರೆ. ನಿಮ್ಮ ಬಗ್ಗೆ ಅನೇಕ ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ನೀವು ಅವರ ಬಗ್ಗೆ ಯೋಚಿಸಿ, ಅವರನ್ನು ನಿರಾಶೆಗೊಳಿಸದಿರಿ. ನೀವು ಅವರಿಗೆ ಕೊಡಬಹುದಾದ ಮೆಚ್ಚಿನ ಕಾಣಿಕೆ ಎಂದರೆ ನಿಮ್ಮ ಯಶಸ್ಸಿನ ಅಂಕಪಟ್ಟಿ. ನಿಮ್ಮ ಹೆಸರು ಪತ್ರಿಕೆಯಲ್ಲಿ ಬಂದರೆ ಅವರಿಗೆ ಸ್ವರ್ಗಕ್ಕೆ ಒಂದೇ ಗೇಣು. ನೀವು ಓದಬೇಕಾದ್ದು ನಿಮಗಾಗಿ ಮಾತ್ರವಲ್ಲ. ನಿಮ್ಮನ್ನು ಪ್ರೀತಿಸುವವರಿಗಾಗಿಯೂ ಹೌದು.

## ಪೋಷಕರಿಗೆ ಸಲಹೆ

ಆತ್ಮೀಯ ಪೋಷಕರೇ, ಪರೀಕ್ಷೆಯ ಸಮಯ, ನಿಮ್ಮ ಮಕ್ಕಳಿಗೆ ಮಾತ್ರವಲ್ಲ ನಿಮಗೂ ಪರೀಕ್ಷೆಯೇ! ಕೇವಲ ಪರೀಕ್ಷೆಯ ಸಮಯದಲ್ಲಿ ನಿಮ್ಮ ಮಕ್ಕಳ ಕಡೆ ಗಮನ ನೀಡಿದರಷ್ಟೇ ಸಾಲದು, ವರ್ಷಪೂರ್ತಿ ಅವರಿಗೆ ಮಾರ್ಗದರ್ಶಕ ರಾಗಿರಬೇಕು. ಈ ಕೆಳಗಿನ ಸಲಹೆಗಳನ್ನು ದಯವಿಟ್ಟು ಗಮನಿಸಿ.

**1. ಮಗುವನ್ನು ಗೌರವಿಸಿ :** ನಿಮ್ಮ ಮಗುವಿನ ಪ್ರೀತಿಯನ್ನು ಗಳಿಸಿ. ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಿ, ತನ್ನ ಭಾವನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವಷ್ಟು ಅವರಿಗೆ ಹತ್ತಿರವಾಗಿ. ಕಡಿಮೆ ಅಂಕ ಬಂದಾಗ ತೆಗಳದಿರಿ. ಬೇರೊಂದು ಮಗುವಿನೊಂದಿಗೆ ಹೋಲಿಸದಿರಿ. 'ಪಕ್ಕದ ಮನೆ ಕಿಟ್ಟ ನಿನಗಿಂತ ಜಾಣ' ಎಂದಾಗ ನಿಮ್ಮ ಮಗುವಿನ ಆತ್ಮಸ್ಥೈರ್ಯ ಉಡುಗುತ್ತದೆ. ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸುವಂತೆ ನಡೆದುಕೊಳ್ಳಿರಿ.

**2. ನಿಮ್ಮ ಮಗುವಿನ ಆರೈಕೆ :** ನಿಮ್ಮ ಮಗುವಿನ ಆಹಾರದ ಬಗ್ಗೆ ವಿಶೇಷ ಗಮನವಿರಲಿ. ಪರೀಕ್ಷೆಯ ದಿನವಂತೂ ಆಲೂ ಚಿಪ್ಸ್, ಕರೆದ ಪದಾರ್ಥಗಳು ಮುಂತಾದವನ್ನು ಕೊಡಬೇಡಿ. ಅತಿ ಖಾರ, ರೆಫ್ರಿಜಿರೇಟರ್ ನಿಂದ ತೆಗೆದ ತಂಪು ಪದಾರ್ಥಗಳನ್ನು ವರ್ಜಿಸಿ, ಹಾಲು, ಮೊಸರು, ಜೇನು ಮುಂತಾದವು ಶಕ್ತಿವರ್ಧಕ ಅದನ್ನು ನೀಡಿ. ಕನಿಷ್ಠ 7 ಗಂಟೆ ನಿದ್ರೆಗೆ ಅವಕಾಶ ಮಾಡಿಕೊಡಿ. ಕೊನೆಯದಾಗಿ ಪರೀಕ್ಷೆಗೆ ಹೋಗುವ ಮುನ್ನ ಆಶೀರ್ವದಿಸಿ ಕಳಿಸಿ. ಅಂದು ಯಾವ ಕಾರಣಕ್ಕೂ ಮಗುವಿನ ಮನಸ್ಸನ್ನು ಮುದಡದಿರಿ. ಪರೀಕ್ಷೆಯಿಂದ ಬಂದ ಕೂಡಲೇ ನೂರೆಂಟು ಪ್ರಶ್ನೆ ಹಾಕದೆ ಮರುದಿನದ ಸಿದ್ಧತೆಗೆ ಸಹಕರಿಸಿರಿ.

**3. ನಿಮ್ಮ ಮಗು 'ಕೂಚುಭಟ್ಟ' ಆಗದಿರಲಿ :** 'ಓದಿ ಓದಿ ಮರುಳಾದ ಕೂಚುಭಟ್ಟ' ಎಂಬ ಗಾದೆ ಇದೆ. ಸದಾ ಓದು ಓದು ಎಂದು ಮಗುವನ್ನು ಆಗ್ರಹಿಸದಿರಿ. ಬುದ್ದಿಯೊಂದಿಗೆ ಶರೀರ, ಮನಸ್ಸಿಗೂ ಶಿಕ್ಷಣ ಬೇಕು. ಸದೃಢವಾದ ಶರೀರದಲ್ಲಿ ಆರೋಗ್ಯಕರ ಮನಸ್ಸಿರುತ್ತದೆ. ಆದ್ದರಿಂದ ನಿಮ್ಮ ಮಕ್ಕಳನ್ನು ಯೋಗಾಭ್ಯಾಸದಲ್ಲಿ ತೊಡಗಿಸಿ. ಶಾಲೆಯಲ್ಲಿ ಯಾವುದಾದರೊಂದು ಆಟವಾಡಲು ಪ್ರೋತ್ಸಾಹಿಸಿ. ಹಾಡು, ಹಸೆ, ನಾಟ್ಯ, ಚಿತ್ರಕಲೆ ಇತ್ಯಾದಿ ಕಲಾಪ್ರಕಾರಗಳ ಯಾವುದಾದರೊಂದರಲ್ಲಿ ತರಬೇತಿ ಕೊಡಿಸಿ. ಮನೆಯಲ್ಲಿ ಮುಂಜಾನೆ ಏಳುವುದು, ವ್ಯಾಯಾಮ ಮಾಡುವುದು, ಸ್ನಾನಮಾಡಿ ದೇವರ ಪ್ರಾರ್ಥನೆ ಮಾಡುವುದು, ಮನೆಯಲ್ಲಿನ ಹಿರಿಯರಿಗೆ ನಮಸ್ಕರಿಸುವುದು ನೆಂಟರಿಷ್ಟರೊಂದಿಗೆ ಬೆರೆಯುವುದು ಮುಂತಾದ ಮೌಲ್ಯ ಶಿಕ್ಷಣವನ್ನೂ ನೀಡಿರಿ. ಇದೆಲ್ಲಾ ಅವರ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ತುಂಬ ಮಹತ್ವದ ಪಾತ್ರವನ್ನು ವಹಿಸುತ್ತದೆ. ●


## ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ

(ಪ್ರಾರೂಪ 8, ವಿಧಿ 8)

| | |
|---|---|
| ಪ್ರಕಟಣೆಯ ಸ್ಥಳ | : ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಪ್ರಕಾಶಕ | : ಜೆ. ಎಂ. ಜೋಶಿ<br>ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) |
| ಮಾಲೀಕತ್ವ | : ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)<br>ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಸಂಪಾದಕ | : ಜೆ. ಎಂ. ಜೋಶಿ (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು – 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಘೋಷಿಸುತ್ತೇನೆ.

ಬೆಂಗಳೂರು (ಸಹಿ) ಜೆ. ಎಂ. ಜೋಶಿ
1.3.2022 ಪ್ರಕಾಶಕ

➢ ಪುಟ 6 ರಿಂದ.....

Setting Body) ಆಗಿ ರೂಪುಗೊಂಡು ಶಿಕ್ಷಕರ ವೃತ್ತಿಪರತೆಯ ಮಾನಕಗಳನ್ನು ಅಭಿವೃದ್ಧಿಪಡಿಸುತ್ತದೆ. ಇವುಗಳ ಆಧಾರದ ಮೇಲೆ ಇನ್ನು ಮುಂದೆ ಬಡ್ತಿ ಮತ್ತು ಸಂಬಳ ಹೆಚ್ಚಳದಂತಹ ಅಂಶಗಳು ಈ ಮಾನಕಗಳ ಮೌಲ್ಯಮಾಪನವನ್ನೇ ಅವಲಂಬಿಸಿರುತ್ತವೆ. ಈ ವೃತ್ತಿಪರ ಮಾನಕಗಳನ್ನು 2030ಕ್ಕೆ ಪರಿಶೀಲಿಸಬೇಕು. ನಂತರದ ಪ್ರತಿ ಹತ್ತು ವರ್ಷಗಳಿಗೊಮ್ಮೆ ಪರಿಣಾಮಕಾರಿತ್ವದ ವಿಶ್ಲೇಷಣೆಯ ಆಧಾರದ ಮೇಲೆ ಪರಿಷ್ಕರಿಸಬೇಕು.

### ಶೈಕ್ಷಣಿಕ ಪರಿಸರ :

ವಿದ್ಯಾರ್ಥಿಗಳು, ಪೋಷಕರು, ಪ್ರಾಂಶುಪಾಲರು ಮತ್ತು ಇತರ ಸಹಾಯಕ ಸಿಬ್ಬಂದಿಯನ್ನು ಒಳಗೊಂಡ ಸ್ಪಂದನಶೀಲ, ಕಾಳಜಿಯುತ ಸಮುದಾಯದ ಸದಸ್ಯರ ಮಕ್ಕಳ ಕಲಿಕೆಗೆ ಪೂರಕವಾದ ಪರಿಸರ ಕಲ್ಪಿಸಿಕೊಡಬೇಕು ಮತ್ತು ಉತ್ತಮ ಶೌಚಾಲಯಗಳು, ಶುದ್ಧ ಕುಡಿಯುವ ನೀರು, ಸ್ವಚ್ಛ ಮತ್ತು ಮನರಂಜನಾತ್ಮಕ ವ್ಯವಸ್ಥೆಗಳು, ವಿದ್ಯುತ್ ಸೌಲಭ್ಯ, ಗಣಕಯಂತ್ರಗಳು, ಇಂಟರ್ನೆಟ್, ಗ್ರಂಥಾಲಯಗಳು ಮತ್ತು ಕ್ರೀಡೆ ಹಾಗೂ ಮನರಂಜನಾ ಸಂಪನ್ಮೂಲಗಳನ್ನು ಒಳಗೊಂಡಂತೆ ಸಾಕಷ್ಟು ಮತ್ತು ಸುರಕ್ಷಿತ ಮೂಲ ಸೌಕರ್ಯಗಳನ್ನು ಒದಗಿಸುವುದು, ಸರ್ಕಾರ ಯಾವುದೇ ರೀತಿಯಲ್ಲಿಯೂ ಶಾಲೆಗಳ ದಾಖಲಾತಿಯು ಕುಸಿತವಾಗದಂತೆ ನೋಡಿಕೊಳ್ಳುವುದು ಹಾಗೂ ಶಾಲಾ ಸಂಕೀರ್ಣದ ಎಲ್ಲ ಸೌಲಭ್ಯಗಳನ್ನು ಸುತ್ತಲಿನ ಎಲ್ಲ ಶಾಲೆಗಳಿಗೆ ತಲುಪುವಂತೆ ಯೋಜನೆ ರೂಪಿಸುವುದು.

- ಶಿಕ್ಷಕರಿಗೆ ಬೋಧಾನಾ ವಿಧಾನದ ಆಯ್ಕೆ ಮಾಡಲು ಹೆಚ್ಚಿನ ಸ್ವಾತಂತ್ರ್ಯ ನೀಡುವುದರಿಂದ ಕಲಿಕೆ ಪರಿಣಾಮಕಾರಿಯಾಗಿರುತ್ತದೆ. ಮಕ್ಕಳ ಸಾಮಾಜಿಕ–ಭಾವನಾತ್ಮಕ ಕಲಿಕೆಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಈ ಹಂತದಲ್ಲಿ ಶಿಕ್ಷಕರು ಅಲ್ಲಿಯ ಸ್ಥಿತಿಗತಿಗಳಿಗೆ ಅನುಗುಣವಾಗಿ ವಾಸ್ತವಿಕವಾಗಿ ಅವಶ್ಯವಿರುವ ಹೊಸ ವಿಧಾನಗಳನ್ನು ಬಳಸಬಹುದಾಗಿದೆ.

### ವಿಶೇಷ ಶಿಕ್ಷಕರು:

ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ನಿರ್ದಿಷ್ಟ ಕಲಿಕಾ ನ್ಯೂನತೆಗಳಿರುವ ವಿದ್ಯಾರ್ಥಿಗಳಿಗೆ ಮತ್ತು ವಿಶೇಷ ಚೇತನ ಮಕ್ಕಳಿಗೆ/ ದಿವ್ಯಾಂಗ ಮಕ್ಕಳಿಗೆ ಕಲಿಸಲು ತಜ್ಞ ಶಿಕ್ಷಕರ ಅವಶ್ಯಕತೆ ಇರುತ್ತದೆ. ಅಂತಹ ಶಿಕ್ಷಕರಿಗೆ ವಿಷಯ ಬೋಧನಾ ಜ್ಞಾನ ಮತ್ತು ಶಿಕ್ಷಣದ ವಿಷಯ– ಸಂಬಂಧಿತ ಗುರಿಗಳ ತಿಳುವಳಿಕೆ ಮಾತ್ರವಲ್ಲದೆ ಮಕ್ಕಳ ವಿಶೇಷ ಅವಶ್ಯಕತೆಗಳನ್ನು ಪೂರೈಸಲು ಬೇಕಾದ ಸಂಬಂಧಿತ ಕೌಶಲ್ಯಗಳ ಅಗತ್ಯವೂ ಇರುತ್ತದೆ. ಆದ್ದರಿಂದ ಸೇವಾ ಪೂರ್ವ ಮತ್ತು ಸೇವಾ ನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮಕ್ಕೆ ಹೆಚ್ಚು ಒತ್ತುಕೊಡುವುದರ ಜೊತೆಗೆ ಅಲ್ಪಾವಧಿಯ ಪರಿಣಾಮಕಾರಿಯಾದ ಕೋರ್ಸ್‌ಗಳನ್ನು ಪ್ರಾರಂಭಿಸುವುದು. ಅದಕ್ಕಾಗಿ NCTE ಮತ್ತು RCI (Rehabilitation Council of India) ದ ಮಧ್ಯದಲ್ಲಿ ಸಮತೋಲನ ಇರುವಂತೆ ನೋಡಿಕೊಳ್ಳಬೇಕು.

ಭಾರತೀಯ ಪರಂಪರೆಯನ್ನು ಮತ್ತು ದೇಶೀಯ ಜ್ಞಾನದ ಬೆಳವಣಿಗೆಯ ದೃಷ್ಟಿಯಿಂದ NEP–2020 ಯಲ್ಲಿ ಶಿಕ್ಷಕರ ಶಿಕ್ಷಣಕ್ಕೆ ಮಹತ್ವದ ಸ್ಥಾನವಿದ್ದು ಅನೇಕ ಧನಾತ್ಮಕ ಬದಲಾವಣೆಗೆ ಸೂಚನೆಯನ್ನು ನೀಡಿದೆ. ಸಮವರ್ತಿ ಪಟ್ಟಿಯಲ್ಲಿರುವ ಶಿಕ್ಷಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ಸಹಯೋಗದಲ್ಲಿ NEP ಸೂಚಿಸಿದ ಅಂಶಗಳನ್ನು ಅಳವಡಿಸಿಕೊಂಡು ಶಿಕ್ಷಕರ ಶಿಕ್ಷಣ ರೂಪಿಸಿದರೆ ಕಲಿಕೆ ಉತ್ತಮ ಪಡಿಸಲು ಮತ್ತು ಭವ್ಯ ಭಾರತದ ನಿರ್ಮಾಣಕ್ಕಾಗಿ ಮುಂಬರುವ ಶಿಕ್ಷಣ ಪದ್ಧತಿ ಪೂರಕವಾಗುವುದು ಎನ್ನುವುದು ನನ್ನ ಭಾವನೆ. ಓದುಗರಾದ ತಾವು ತಮ್ಮ ಭಾವನೆಗಳನ್ನು ಹಂಚಿಕೊಳ್ಳಬಹುದಾಗಿದೆ. ●

# ರಾಷ್ಟ್ರೀಯ ಕಾರ್ಯಕಾರಿಣಿ – ಒಂದು ವರದಿ

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಆಗಸ್ಟ್ 1 ರಂದು ಒಂದೇ ದಿನ ಒಂದು ಲಕ್ಷ ವಿದ್ಯಾಲಯಗಳನ್ನು ತಲುಪುವ ಗುರಿಯನ್ನು ಹೊಂದಿದೆ. ಇದರ ಜೊತೆಗೆ ದೇಶದ 75 ವಿಶ್ವವಿದ್ಯಾಲಯಗಳಲ್ಲಿ ಅಮೃತೋತ್ಸವದ ವಿಷಯದಲ್ಲಿ ಸೆಮಿನಾರ್‌ಗಳನ್ನು ಮತ್ತು 750 ಮಹಾವಿದ್ಯಾಲಯಗಳಲ್ಲಿ ವ್ಯಾಖ್ಯಾನವನ್ನು ಆಯೋಜಿಸುವ ಗುರಿಯನ್ನು ಹೊಂದಿದೆ ಎನ್ನುವ ನಿರ್ಣಯವನ್ನು ಗುಜರಾತ್ ರಾಜ್ಯದ ವಡೋದರದ ಓಂ ರೀಜೆನ್ಸಿ ಯಲ್ಲಿ ದಿನಾಂಕ 26–27.02.2022 ರಂದು ನಡೆದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿಯಲ್ಲಿ ತೆಗೆದುಕೊಳ್ಳಲಾಯಿತು.

ಬೈಠಕ್ ಅನ್ನು ಉದ್ದೇಶಿಸಿ ಮಾತನಾಡುವಾಗ ಸಂಘಟನೆಯ ಅಧ್ಯಕ್ಷರಾದ ಜೆ.ಪಿ. ಸಿಂಘಾಲ್‌ರವರು ಈ ಸಮಯ ಸಾಮಾಜಿಕ ಪರಿವರ್ತನೆಯ ಕಾಲ ಮತ್ತು ಸಾಮಾಜಿಕ ಪರಿವರ್ತನೆಯ ಕಾರ್ಯವನ್ನು ಶಿಕ್ಷಕರೇ ಮಾಡಬೇಕೆಂದರು. ರಾಷ್ಟ್ರೀಯ ಶಿಕ್ಷಣ ನೀತಿ 2020 ನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯು ಶಿಕ್ಷಕರ ಮೇಲಿದೆ ಎಂದು ಹೇಳಿದರು. ಮಹಾಸಂಘದ ಕಾರ್ಯಕರ್ತ ಶಿಕ್ಷಕರು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹೇಗೆ ಕ್ರಿಯಾನ್ವಯನಗೊಳಿಸಬೇಕೆಂದು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿದರು. ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಆಗುವ ಲಾಭಗಳೇನು ಎನ್ನುವ ವಿಷಯವನ್ನು ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮತ್ತು ಶಿಕ್ಷಕರಿಗೆ ತಲುಪಿಸುವ ಅವಶ್ಯಕತೆಯನ್ನು ಪೂರೈಸುವ ಜವಾಬ್ದಾರಿ ಮಹಾಸಂಘದ ಕಾರ್ಯಕರ್ತರ ಮೇಲಿದೆ ಎಂದು ಹೇಳಿದರು.

ಕಾರ್ಯಕಾರಿಣಿಯಲ್ಲಿ ಶಿಕ್ಷಕರ ಎಲ್ಲಾ ಸಮಸ್ಯೆಗಳಿಗೆ ಹೇಗೆ ಸಮಾಧಾನ ಪಡಿದುಕೊಳ್ಳುವುದು ಎನ್ನುವದರ ಬಗ್ಗೆಯೂ ಚರ್ಚಿಸಲಾಯಿತು. ಕೇಂದ್ರಕ್ಕೆ ಸಂಬಂಧಿಸಿದ ಶಿಕ್ಷಕರ ಸಮಸ್ಯೆಗಳಿಗೆ ಆದಷ್ಟು ಬೇಗ ಕೇಂದ್ರದ ಶಿಕ್ಷಣ ಮಂತ್ರಿಗಳನ್ನು ಹಾಗೂ ರಾಜ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ರಾಜ್ಯ ಸಂಘಟನೆಗಳ ಮೂಲಕ ರಾಜ್ಯ ಸರಕಾರಗಳ ಗಮನವನ್ನು ಸೆಳೆಯುವುದಾಗಿ ತೀರ್ಮಾನಿಸಲಾಯಿತು.

ಇದೇ ಸಮಯದಲ್ಲಿ ಸಂಘಟನಾತ್ಮಕ ವಿಷಯಗಳು ಹಾಗೂ ಮುಂಬರುವ ಸಮಯದಲ್ಲಿ ಮಹಾಸಂಘವು ಕೈಗೊಳ್ಳುವ ಕಾರ್ಯಕ್ರಮಗಳ ರೂಪುರೇಷೆಯನ್ನು ತಯಾರು ಮಾಡಲಾಯಿತು. ಸಂಘಟನೆಯಲ್ಲಿ ದೇಶದ ಎಲ್ಲಾ ರಾಜ್ಯಗಳ ಶಿಕ್ಷಕರ ಹಾಗೂ ವಿಶ್ವವಿದ್ಯಾಲಯಗಳ ಸಂಘಟನೆಗಳ ಉಪಸ್ಥಿತಿ ಉಲ್ಲೇಖನೀಯವಾಗಿತ್ತು.

ಕಾರ್ಯಕಾರಿಣಿಯಲ್ಲಿ ಅಕ್ಟೋಬರ್‌ನಲ್ಲಿ ನಡೆದ ಕಾರ್ಯಕಾರಿಣಿಯ ನಂತರದಲ್ಲಿ ರಾಜ್ಯ ಸಂಘಟನೆಗಳು ಕೈಗೊಂಡಿರುವ ವರದಿಗಳನ್ನು ನೀಡಲಾಯಿತು. ಕರ್ನಾಟಕದಿಂದ ರಾಷ್ಟ್ರೀಯ ಸಹ ಸಂಘಟನಾ ಮಂತ್ರಿಯಾದ ಶ್ರೀ ಲಕ್ಷ್ಮಣಜೀ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾರವರು, ದಕ್ಷಿಣ ಮಧ್ಯ ಕ್ಷೇತ್ರೀಯ ಪ್ರಮುಖರಾದ ಶ್ರೀ ಬಾಲಕೃಷ್ಣಭಟ್‌ಜೀ, ಮಹಿಳಾ ವಿಭಾಗದ ಕಾರ್ಯದರ್ಶಿಗಳಾದ ಶ್ರೀಮತಿ ಮಮತಾ ಡಿ.ಕೆಯವರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್‌ರವರು, ಕಾರ್ಯಾಧ್ಯಕ್ಷರಾದ ಶ್ರೀ ಅರುಣ್ ಶಹಾಪೂರ್‌ರವರು, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್‌ರವರು ಉಪಸ್ಥಿತರಿದ್ದರು. ●

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ




**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**


## ರಾಷ್ಟ್ರಭಕ್ತ ಬಾಲಗಂಗಾಧರ ತಿಲಕ್

ಬಾಲಗಂಗಾಧರ ತಿಲಕ್‌ರವರು ಓರ್ವ ಅಪ್ರತಿಮ ರಾಷ್ಟ್ರಪ್ರೇಮಿಯಾಗಿದ್ದರು. ತಿಲಕ್‌ರವರು 'ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿ ಹೋರಾಟ ಮಾಡಿದಂತಹ ಭಾರತದ ಮಹಾಪುರುಷ.

ಬಾಲಗಂಗಾಧರ ತಿಲಕ್‌ರು 1856ರ ಜುಲೈ 23ರಂದು ಮಹಾರಾಷ್ಟ್ರದ ರತ್ನಗಿರಿಯಲ್ಲಿ ಜನಿಸಿದರು. ಮೆಟ್ರಿಕ್ಯುಲೇಷನ್ ಬಿ.ಎ. ಮತ್ತು ಕಾನೂನು ಪದವಿಯನ್ನು ಗಳಿಸಿದರು. ತಿಲಕರಿಗಿದ್ದ ರಾಷ್ಟ್ರಪ್ರೇಮದ ಫಲವಾಗಿ ಬ್ರಿಟಿಷ್‌ರ ದಬ್ಬಾಳಿಕೆ ಮತ್ತು ಸಾಮ್ರಾಜ್ಯಶಾಹಿತ್ವವನ್ನು ಪ್ರಬಲವಾಗಿ ವಿರೋಧಿಸುತ್ತಿದ್ದರು. ಅವರ ಪತ್ರಿಕೆಗಳಾದ ಮರಾಠ ಮತ್ತು ಕೇಸರಿಗಳಲ್ಲಿ ಬ್ರಿಟಿಷ್ ಆಡಳಿತವನ್ನು ಖಂಡಿಸಿದರು. ಬ್ರಿಟಿಷ್‌ರು ಭಾರತವನ್ನು ಆರ್ಥಿಕವಾಗಿ ದಿವಾಳಿಗೊಳಿಸುತ್ತಿದ್ದಾರೆ, ವ್ಯಾಪಾರದ ಸಂಪರ್ಕದಿಂದ ವರ್ಷದಲ್ಲಿ 24 ಕೋಟಿ ರೂಪಾಯಿಗಳ ಹಣವನ್ನು ಸೂರೆ ಮಾಡುತ್ತಿದ್ದಾರೆ ಎಂದು ಭಾರತೀಯರನ್ನು ಜಾಗೃತಗೊಳಿಸುತ್ತಿದ್ದರು.

ಸ್ವರಾಜ್ಯವಿಲ್ಲದ ಜೀವನ ದಾಸ್ಯದ ಜೀವನ ಇದರಿಂದ ಮುಕ್ತಿ ಪಡೆಯಲೇಬೇಕು. ಅದಕ್ಕಾಗಿ ಎಲ್ಲರೂ ಸಿದ್ಧರಾಗಿ ಹೋರಾಟ ಮಾಡಬೇಕು. ದೇಶಪ್ರೇಮಿಗಳಾದ ನಾವೆಲ್ಲರೂ ಪರಕೀಯರ ದಾಸ್ಯದಿಂದ ರಾಷ್ಟ್ರವನ್ನು ವಿಮೋಚನೆಗೊಳಿಸೋಣ ಎನ್ನುವ ಕರೆ ನೀಡಿದರು. ಪ್ರತಿಯೊಬ್ಬ ಭಾರತೀಯನು ತನ್ನ ದೇಹ ಮತ್ತು ಆತ್ಮವನ್ನು ಸ್ವದೇಶ ಮಾಡಿಕೊಳ್ಳುವ ಮೂಲಕ ಸ್ವದೇಶಿ ವಸ್ತುಗಳನ್ನು ಮಾತ್ರ ಉಪಯೋಗಿಸಿ ವಿದೇಶಿ ವಸ್ತುಗಳನ್ನು ಬಳಸಬೇಡಿ ಎಂದು ಕರೆ ನೀಡಿದ್ದರು. ಇದಕ್ಕಾಗಿ ಸ್ವಯಂ ತ್ಯಾಗ ಹಾಗೂ ಧೈರ್ಯದ ಮನೋಭಾವನೆಯನ್ನು ತಾಳಬೇಕು. ಆಗ ಮಾತ್ರ ಬಹಿಷ್ಕಾರವು ಫಲಕಾರಿಯಾಗುವುದು ಎಂಬುದು ಅವರ ಅಪಾರ ನಂಬಿಕೆಯಾಗಿತ್ತು. ಇದನ್ನು ಭಾರತೀಯರಿಗೆ ಮನವರಿಕೆ ಮಾಡಿದರು. ಹೀಗೆ ಒಗ್ಗಟ್ಟಿನಲ್ಲಿ ಬಲವಿದೆ ನಾವೆಲ್ಲರೂ ಒಗ್ಗೂಡಿ ಹೋರಾಡಿ, ಸ್ವಾತಂತ್ರ್ಯವನ್ನು ಗಳಿಸಲೇಬೇಕು ಎಂಬುದು ಇವರ ಸಂಕಲ್ಪವಾಗಿತ್ತು.

ಹೀಗೆ ತಿಲಕ್‌ರವರು ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಸ್ವಾತಂತ್ರ್ಯದ ಕನಸನ್ನು ನನಸು ಮಾಡಿದವರು. ರಾಷ್ಟ್ರವನ್ನು ದೇವರೆಂದು ಭಾವಿಸಿದ್ದ ಮಹಾಪುರುಷನಿಗೆ ನಮನಗಳನ್ನು ಸಲ್ಲಿಸೋಣ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ಭಾರತದ ಸ್ವಾತಂತ್ರ್ಯಪೂರ್ವದಲ್ಲಿ ಕೇಸರಿ ಪತ್ರಿಕೆಯನ್ನು ಸಂಪಾದಿಸುತ್ತಿದ್ದ ಹೋರಾಟಗಾರ ಯಾರು?
2. ಶಿವಾಜಿ ಮಹಾರಾಜರ ತಾಯಿಯ ಹೆಸರೇನು?
3. ವಿಕ್ರಮಾದಿತ್ಯನ ರಾಜಧಾನಿ ಯಾವುದಾಗಿತ್ತು?
4. ರಾಜ್ಯಪಾಲರನ್ನು ಯಾರು ನೇಮಿಸುತ್ತಾರೆ?
5. ಕರ್ನಾಟಕದ ಸಿಂಹ ಎಂದು ಹೆಸರು ಪಡೆದವರು ಯಾರಾಗಿದ್ದರು?

## ಜ್ಞಾನ ವಿಜ್ಞಾನ

1. 1. ಕರ್ನಾಟಕದ ಅತಿ ದೊಡ್ಡ ಅಣೆಕಟ್ಟು ಯಾವುದು?
2. ಸಂಪೂರ್ಣ ಸಾಕ್ಷರತೆ ಸಾಧಿಸಿದ ಕರ್ನಾಟಕದ ಮೊದಲ ಜಿಲ್ಲೆಯನ್ನು ತಿಳಿಸಿ
3. ಭಾರತದ ಮಾನವ ಕಂಪ್ಯೂಟರ್ ಎಂದು ಹೆಸರಾದವರು ಯಾರು?
4. ವಿಶ್ವದ ಮೊದಲ ಸಂಚಾರಿ ನೇತ್ರ ಚಿಕಿತ್ಸಾಲಯ ಯಾರು ಸ್ಥಾಪಿಸಿದರು?
5. ಅಡುಗೆ ಉಪ್ಪಿನಲ್ಲಿರುವ ಮೂಲವಸ್ತುಗಳು ಯಾವುವು?

## ಫೆಬ್ರವರಿ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಲಾಲಾ ಲಜಪತರಾಯ
2. ಸರ್ದಾರ್ ವಲ್ಲಭಭಾಯ ಪಟೇಲ್
3. ಇಂದ್ರಪ್ರಸ್ಥ
4. ಸಾಮ್ರಾಟ್ ಅಶೋಕ
5. ಡಾ॥ ಬಿ ಆರ್ ಅಂಬೇಡ್ಕರ್

**ಜ್ಞಾನ–ವಿಜ್ಞಾನ – ಉತ್ತರಗಳು**

1. ಮತ್ತೂರು
2. ಶ್ರೀ ರಾಮಾನುಜಾಚಾರ್ಯರು
3. ಗುರುಗ್ರಹ
4. ಬೆಂಗಳೂರು
5. ವರಾಹಮಿಹಿರ

**ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದಡೆ, ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.**

## ಸಂಪಾದಕೀಯ

### ಯುಗಾದಿ ಮರಳಿ ಬರುವುದರ ಜೊತೆಗೆ ಸಂಬಂಧಗಳ ಹೊಸ ರೂಪವನ್ನು ತಂದೀತೆ?

ನಮ್ಮೆಲ್ಲಾ ಪ್ರೀತಿಯ ಓದುಗರಿಗೆ ಶುಭಕೃತ್ ಸಂವತ್ಸರದ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು. ಯುಗಾದಿ ಹಬ್ಬ ಬಂದಿತೆಂದರೆ ಮನೆಗಳಲ್ಲಿ ಹಬ್ಬದ ಸಂಭ್ರಮ. ಹಬ್ಬದ ಸಂಭ್ರಮವೆಂದರೆ ಮನೆಯಲ್ಲೆಲ್ಲಾ ಮಕ್ಕಳ, ಸಂಬಂಧಿಕರ ಸಂಭ್ರಮದ ಓಡಾಟ. ದೂರವಿರುವವರಿಗೆ ಶುಭಾಶಯಗಳ ಓಡಾಟ. ಅದರಲ್ಲೂ ಈಗಂತೂ ಒಬ್ಬರ ಮೊಬೈಲ್‌ನಿಂದ ಬಂದ ಶುಭಾಶಯಗಳನ್ನು ಪೂರ್ಣವಾಗಿ ನೋಡದೆಯೇ ಇನ್ನೊಬ್ಬರಿಗೆ ಕಳುಹಿಸಿಬಿಡುವುದು ಅಭ್ಯಾಸವಾಗಿ ಬಿಟ್ಟಿದೆ. ಇದರಲ್ಲಿ ಹೊಸತನವಿರುವುದು ಒಂದು ಕಡೆ ಇರಲಿ, ತನ್ನತನವಂತೂ ಇರುವುದೇ ಇಲ್ಲ. ಒಟ್ಟಾರೆಯಾಗಿ ಶುಭಾಶಯಗಳನ್ನು ಕಳುಹಿಸಿದೆವೆಂಬುದಾದರೆ ಸಾಕು ಎನ್ನುವಷ್ಟರ ಮಟ್ಟಿಗೆ ನಾವಾಗಿಬಿಟ್ಟಿದ್ದೇವೆ. ಇಡೀ ಪ್ರಕೃತಿಯೇ ಹೊಸತನವನ್ನು ತಂದುಕೊಳ್ಳುವ ಸಮಯದಲ್ಲಿ ನಮ್ಮಲ್ಲೂ ಏನಾದರೂ ಒಂದು ಹೊಸತನ ಬಂದಿತೆಂದರೆ ಯುಗಾದಿಯ ಕಳೆಯೇ ಬೇರೆಯಲ್ಲವೇ?

ಹಾಡು ಹಳೆಯದಾದರೇನು ಭಾವ ನವ ನವೀನ ಎಂಬುದು ಜನಪ್ರಿಯ ಗೀತೆ. ಇಲ್ಲಿ ಹಾಡು ಹಳೆಯದು, ಭಾವವೂ ಹಳೆಯದೂ, ರೀತಿಯೂ ಹಳೆಯದು, ಆದರೆ ಬಹಳ ವರ್ಷಗಳ ನಂತರ ಅದೇ ರೀತಿ ಮಾಡಿ ಹೊಸತನವನ್ನು ತಂದು, ಸಂಬಂಧಗಳಿಗೆ ಒಂದು ಹೊಸ ನೆಲೆಗಟ್ಟನ್ನು ತಂದುಕೊಡಲು ಯೋಚಿಸೋಣವೇ? ನಾವು ಮೊಬೈಲ್ ಲೋಕದಿಂದ ಹೊರಬಂದು ಪತ್ರಗಳ ಹಳೆತನಕ್ಕೆ ಬಂದು ಹಳೇ ಸಂಬಂಧಗಳಿಗೆ ಹೊಸತನವನ್ನು ತಂದರೇ ಹೇಗೆ? ಶಿಕ್ಷಕರಾದ ನಾವು ಮಾಡುವುದಲ್ಲದೇ, ನಮ್ಮ ವಿದ್ಯಾರ್ಥಿಗಳು ಇದನ್ನು ಮಾಡಲು ಪ್ರೇರೇಪಿಸಿದರೆ ಒಳಿತಲ್ಲವೇ? ಹಾಗಾದರೆ ಮಾಡುವುದೇನೆಂದು ಹೇಳುವೆ ಬನ್ನಿ. ಐವತ್ತು ವರ್ಷ ದಾಟಿದವರಿದ್ದೇವೆಂದರೆ ನಮಗೆ–ನಿಮಗೆಲ್ಲ ಇದರ ಅನುಭವ ಇದ್ದೇ ಇರುತ್ತದೆ. ಅಂಚೆಯವ ಬಂದು ಅಂಚೆ ಎಂದು ಕೂಗಿ, ಅಂಚೆ ಕೊಡುತ್ತಿದ್ದಾನೆಂದರೆ ಆಗುತ್ತಿದ್ದ ಸಂಭ್ರಮ, ಮೂಡುತ್ತಿದ್ದ ಪ್ರಶ್ನೆಗಳು, ಕುತೂಹಲವನ್ನು ಆದಷ್ಟು ಬೇಗ ನಿವಾರಿಸಿಕೊಳ್ಳುತ್ತಿದ್ದ ರೀತಿಯನ್ನು ಒಂದು ಬಾರಿ ನೆನಪಿಸಿಕೊಳ್ಳಿ. ನಮ್ಮ ಮಕ್ಕಳಿಗೆ ಈ ಅನುಭವವಾಗಬಾರದೇ? ಈ ಯುಗಾದಿಯನ್ನು ಆ ಒಂದು ಶುಭಾಶಯ ಪತ್ರ ಬರೆಯುವುದರ ಮೂಲಕ ಮತ್ತೇ ಆ ಅನುಭವಗಳನ್ನು ಮರುಕಳಿಸೋಣ. ಶಿಕ್ಷಕರಾದ ನಾವು ಸಹ ಒಂದಿಷ್ಟು ವಿದ್ಯಾರ್ಥಿಗಳಿಗೆ, ನಮ್ಮ ಜೊತೆ ಶಿಕ್ಷಣ ನೀಡುತ್ತಿರುವ ಸಹಶಿಕ್ಷಕರಿಗೆ, ಸಂಸ್ಥೆಯ ಮುಖ್ಯಸ್ಥರಿಗೆ ನಮ್ಮದೇ ಭಾವನೆಗಳನ್ನು ವ್ಯಕ್ತಪಡಿಸುವ ಹಾಗೇ ಯುಗಾದಿಯ ಶುಭಾಶಯ ಪತ್ರವನ್ನು ಕಳುಹಿಸೋಣವೇ? ನಮ್ಮ 6ನೇ ತರಗತಿಯಿಂದ 9ನೇ ತರಗತಿಯ ವಿದ್ಯಾರ್ಥಿಗಳೆಲ್ಲರೂ ಪರೀಕ್ಷೆಗಳನ್ನು ಮುಗಿಸಿ ಸಂತೋಷದಿಂದ ಹಬ್ಬ ಆಚರಿಸಲು ತಯಾರಿ ಮಾಡುತ್ತಿರುತ್ತಾರೆ. ಶಾಲೆ ನಡೆಯುವಾಗಲೇ ಅವರಿಗೆ ಶುಭಾಶಯ ಪತ್ರಗಳನ್ನು ಬರೆಯುವ ರೀತಿಯನ್ನು ಹೇಳಿಕೊಟ್ಟು, ಸಂಬಂಧಿಕರಿಗೆ, ಸಹ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಯುಗಾದಿ ಹಬ್ಬಕ್ಕಿಂತ ಮೊದಲೇ ಆ ಪತ್ರಗಳು ತಲುಪುವಂತೆ ಕಳುಹಿಸಲು ಹೇಳಿ. ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಇಂತಹ ಕೊರೋನಾ ಅರ್ಭಟದ ಮಧ್ಯದಲ್ಲಿಯೂ ಅವರ ಓದಿಗೆ ಸಹಕರಿಸಿದ ತಂದೆ–ತಾಯಿ, ಸಂಬಂಧಿಕರು, ಎಷ್ಟೇ ಕಷ್ಟವಾದರೂ ಪಾಠಗಳನ್ನೆಲ್ಲಾ ಮುಗಿಸಿ ಅವರು ಪರೀಕ್ಷೆಯನ್ನು ಧೈರ್ಯವಾಗಿ ಎದುರಿಸಲು ಸಹಕಾರಿಯಾಗಿರುವ ಶಿಕ್ಷಕರಿಗೆ ಧನ್ಯವಾದದೊಂದಿಗೆ ಯುಗಾದಿಯ ಶುಭಾಶಯ ಪತ್ರವನ್ನು ಕಳುಹಿಸಲು ಹೇಳಿ. ಹಾಗೇ ನನಗೂ ಎಷ್ಟು ಶುಭಾಶಯ ಪತ್ರಗಳು ಬರುತ್ತವೆ ಎಂದು ಕಾದಿರುತ್ತೇನೆ ಎಂದು ಹೇಳುವುದರ ಮೂಲಕ ಅವರಲ್ಲಿ ಉತ್ಸಾಹವನ್ನು ತುಂಬಿದರೆ ಎಷ್ಟು ಚೆಂದ.

ಇಷ್ಟೆಲ್ಲಾ ಬರೆದಿರುವ ಸಂಪಾದಕರು ಸಹ ನಿಮ್ಮ ಶುಭಾಶಯ ಪತ್ರಕ್ಕೆ ಕಾದಿರುತ್ತಾರೆ ಎಂಬುದನ್ನು ನಮ್ಮ ಪ್ರೀತಿಯ ಓದುಗರು ಗುರುತಿಸುತ್ತಾರೆಂದು ನಂಬಿ, ನಿಮ್ಮ ಶುಭಾಶಯ ಪತ್ರಗಳಿಗೆ ಜಾತಕ ಪಕ್ಷಿಯಂತೆ ಕಾಯುತ್ತಿರುತ್ತೇನೆ. ಉತ್ತಮ ಶುಭಾಶಯಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. **ನಮ್ಮ ವಿಳಾಸ: ಸಂಪಾದಕರು, ಶಿಕ್ಷಕ ಸಮಾಚಾರ, ನಂ.55, ಯಾದವಸ್ಮೃತಿ, 1 ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು–20.**

ಮತ್ತೊಮ್ಮೆ ನಮ್ಮೆಲ್ಲಾ ಪ್ರೀತಿಯ ಓದುಗರಿಗೆ ಶುಭಕೃತ್ ಸಂವತ್ಸರವು ಶುಭವನ್ನೇ ತರಲೆಂದು ಶಿಕ್ಷಕ ಸಮಾಚಾರದ ತಂಡ ಆಶಿಸುತ್ತದೆ.

–––

### ಯುಗಾದಿ ಹಬ್ಬದ ಹಾರ್ದಿಕ ಶುಭಾಶಯ

ಶುಭಕೃತ್ ಸಂವತ್ಸರವು ನಮ್ಮೆಲ್ಲಾ ಓದುಗರಿಗೆ ಹೊಸತನವನ್ನು, ಹೊಸ ಜೀವನವನ್ನು, ಹೊಸ ಹುರುಪನ್ನು, ಸಂಘಟನೆಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೆಚ್ಚಿಸಲಿ ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಆಶಿಸುತ್ತದೆ.

ಸಂಪಾದಕ



ಯಸ್ಯ ನಾಸ್ತಿ ನಿಜಾ ಪ್ರಜ್ಞಾ
ಕೇವಲಂ ಯೋ ಬಹುಶ್ರುತಃ ।
ನ ಸ ಜಾನಾತಿ ಶಾಸ್ತ್ರಾರ್ಥಂ
ದರ್ವೀ ಸೂಪರ ಸಾನಿವ ॥

ಸುಮ್ಮನೆ ಬಹಳವಾಗಿ ಓದಿದ್ದರೂ ಯಾರಿಗೆ ಸ್ವಂತ ಬುದ್ಧಿಯಿಲ್ಲವೋ ಅವನು ಶಾಸ್ತ್ರಾರ್ಥವನ್ನು ತಿಳಿಯಲಾರ; ಸೌಟಿಗೆ ಅಡಿಗೆಯ ರುಚಿ ಹೇಗೆ ತಿಳಿದೀತು!

\- ವೇದವ್ಯಾಸರು

## ಪರಿವಿಡಿ


- ಮಹಿಳಾ ದಿನಾಚರಣೆ 3
- ಶಿಕ್ಷಕರ ಸಂಘಟನೆ, ಅಸ್ತಿತ್ವ, ಬೆಳವಣಿಗೆ, ಹೋರಾಟ ಯಶಸ್ವಿಗಳಿಗೆ ನಾಂದಿ ಹಾಕಿದ ಶ್ರೀ ಮಳ್ಳೂರು ಆನಂದರಾವ್ 4
- ಪರೀಕ್ಷೆ – ಸಿದ್ಧತೆಯ ಸೂತ್ರ 5
- NEP–2020 ಶಿಕ್ಷಕರ ಶಿಕ್ಷಣಕ್ಕೆ ಭಾರಿ ಬದಲಾವಣೆ ತರಬಯಸುವುದೆ? 6
- ಸ್ವಾತಂತ್ರ್ಯ ಹೋರಾಟ ಹಿನ್ನೋಟ, ಮುನ್ನೋಟ 7
- ರಾಷ್ಟ್ರೀಯ ಕಾರ್ಯಕಾರಿಣಿ ವರದಿ 9
- ವಿದ್ಯಾರ್ಥಿ ಮಿತ್ರ 10
- ವಿವಿಧೆಡೆಗಳಲ್ಲಿ ನಡೆದ ಕಾರ್ಯಕ್ರಮ 11
- ಚಿತ್ರ ಸುದ್ದಿ 12

# ವಿವಿಧೆಡೆಗಳಲ್ಲಿ ನಡೆದ ಕಾರ್ಯಕ್ರಮ

## ಬೆಂಗಳೂರು ದಕ್ಷಿಣ ಜಿಲ್ಲೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ (ರಿ) ಬೆಂಗಳೂರು ದಕ್ಷಿಣ ಜಿಲ್ಲೆಯ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಗಾಗಿ ಫೋನ್ ಇನ್ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ದಿನಾಂಕ 24–02–2022 ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ದಕ್ಷಿಣ ಜಿಲ್ಲೆಯ ಕಾರ್ಯಾಲಯದಲ್ಲಿ ಜರುಗಿತು.

ಮಾನ್ಯ ಉಪನಿರ್ದೇಶಕರಾದ ಶ್ರೀ ಬೈಲಾಂಜನಪ್ಪ ಪಿ.ರವರು ಫೋನ್ ಇನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಸಂಘದ ಈ ವಿನೂತನ ಕಾರ್ಯಕ್ರಮವನ್ನು ಶ್ಲಾಘಿಸಿ ಈ ವರ್ಷದ (2021–22 ) ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಂಡು ಉತ್ತಮ ಫಲಿತಾಂಶವನ್ನು ನೀಡುವಂತಾಗಲಿ ಎಂದು ಶುಭ ಹಾರೈಸಿದರು.

ವಿಷಯ ಪರಿವೀಕ್ಷಕರಾದ ಶ್ರೀ ಕೆ. ಎಂ.ಜಿಯಾ ಉಲ್ಲಾ, ಶ್ರೀ ಕೆಂಪೇಗೌಡ, ಶ್ರೀಮತಿ ಅರ್ಚನಾ ನಾಯಕ್, ಶ್ರೀಮತಿ ಶಿಲ್ಪಾ ಅಕ್ಷರ ದಾಸೋಹ ಅಧಿಕಾರಿಗಳು ಉಪಸ್ಥಿತರಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್, ಕೋಶಾಧ್ಯಕ್ಷರಾದ ಶ್ರೀ ಜೆ. ಎಂ.ಜೋಶಿ ಹಾಗೂ ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಗಂಗಪ್ಪ ರವರು ಭಾಗವಹಿಸಿ ಈ ಕಾರ್ಯಕ್ರಮಕ್ಕೆ ಮೆರಗನ್ನು ತಂದರು. ಕಾರ್ಯಕ್ರಮದ ಯಶಸ್ವಿಗೆ ಕಾರಣಕರ್ತರಾದ ಎಲ್ಲರಿಗೂ ಧನ್ಯವಾದಗಳು.

## ಬಳ್ಳಾರಿ : ಆಂಗ್ಲ ಭಾಷೆ ತರಬೇತಿ ಕಾರ್ಯಕ್ರಮ





ಇಂದು ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಅಕ್ಕಿ ಬಸಮ್ಮ ಪದವಿ ಪೂರ್ವ ಕಾಲೇಜು ತಂಬ್ರಹಳ್ಳಿ ಆವರಣದಲ್ಲಿ puc ಮಕ್ಕಳಿಗೆ ಒಂದು ದಿನದ ಆಂಗ್ಲ ಭಾಷೆಯ ಬಗ್ಗೆ ತರಬೇತಿ ನೀಡುವ ಮೂಲಕ ಪರೀಕ್ಷೆ ಭಯ ಬೇಡ, ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ ಅವರ ಅನೇಕ ಅನುಮಾನದ ಪ್ರಶ್ನೆಗಳಿಗೆ ಉತ್ತರ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಸಮಾಧಾನ ಮಾಡಿದರು. ಶ್ರೀ ಜಂಭುನಾಥವೊಗ್ಗ ನಿವೃತ್ತ ಉಪನ್ಯಾಸಕರು ಹಾಗು ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಟ್ರಪ್ಪ ಆರ್, ರಾಷ್ಟ್ರೋತ್ಥಾನ ಪ್ರೌಢಶಾಲೆ ಹಗರಿಬೊಮ್ಮನಹಳ್ಳಿ ಇವರು ಹಾಗೂ ಕಾಲೇಜ್ ಪ್ರಾಚಾರ್ಯರಾದ ಶ್ರೀ ಜಿ ಸತೀಶ ಮತ್ತು ಅನೇಕ ಉಪನ್ಯಾಸಕರು, 250 ವಿದ್ಯಾರ್ಥಿಗಳಿಗೆ ನೀಡಿದ ತರಬೇತಿ ಯಶಸ್ವಿ ಆಗಿ ಮುಕ್ತಾಯವಾಯಿತು.



## ಬೆಂಗಳೂರು ಉತ್ತರ ಜಿಲ್ಲೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ (ರಿ) ಬೆಂಗಳೂರು ಉತ್ತರ ಜಿಲ್ಲೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಫೋನ್ ಇನ್ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ 23–02–2022 ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯಾಲಯದಲ್ಲಿ ಮಾನ್ಯ ಉಪನಿರ್ದೇಶಕರಾದ ಶ್ರೀ ನಾರಾಯಣರವರು ಫೋನ್ ಇನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಈ ವರ್ಷದ (2021–22 ) ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಶುಭವನ್ನು ಹಾರೈಸಿದರು. ಸಂಘದ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

## ಚಿಕ್ಕೋಡಿ : ಫೋನ್–ಇನ್ ಕಾರ್ಯಕ್ರಮ

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿ ಗದಗ ಜಿಲ್ಲೆ ಚಿಕ್ಕೋಡಿ ಹಾಗೂ ಸಂಘದ ಸಂಯುಕ್ತಾಶ್ರಯದಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ನೇರ ಫೋನ್–ಇನ್ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಈ ಕಾರ್ಯಕ್ರಮವು ಎಸ್.ಎಸ್.ಎಲ್.ಸಿ ಪರೀಕ್ಷೆ ಮುಗಿಯುವರೆಗೂ ಚಾಲ್ತಿಯಲ್ಲಿರುತ್ತದೆ. ಸದರಿ ಉದ್ಘಾಟನಾ ಸಮಾರಂಭದಲ್ಲಿ ಶಿಕ್ಷಣಾಧಿಕಾರಿಗಳಾದ ಶ್ರೀಯುತ ಎ ಸಿ ಗಂಗಾಧರ ಸರ್, ಆರ್ ಎಂ ಎಸ್ ಎ ಸಮನ್ವಯಾಧಿಕಾರಿಗಳಾದ ಶ್ರೀಯುತ ಆಂಜನೇಯ ಸರ್ ಮತ್ತು ಎಸ್ ಎಸ್ ಎಲ್ ಸಿ ಜಿಲ್ಲಾ ನೋಡಲ್ ಅಧಿಕಾರಿಗಳಾದ ಶ್ರೀಯುತ ಅರಿಹಂತ್ ಬಿರಾದಾರ್ ಪಾಟೀಲ್ ಸರ್ ಹಾಗೂ ಸಂಪನ್ಮೂಲ ವ್ಯಕ್ತಿಗಳು ಹಾಗು ಸಂಘದ ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಪದಾಧಿಕಾರಿಗಳು ಉಪಸ್ಥಿತರಿದ್ದರು.





## ಕಲ್ಬುರ್ಗಿ ಜಿಲ್ಲೆಯಿಂದ ಮನವಿ

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರೌಢಶಾಲಾ ವಿಭಾಗದಲ್ಲಿ ಪ್ರಭಾರ ಮುಖ್ಯೋಪಾಧ್ಯಾಯರಾಗಿ ಸುಮಾರು ವರ್ಷಗಳಿಂದ ಆ ಶಾಲೆ ಹಿರಿಯ ಸಹ ಶಿಕ್ಷಕರುಗಳು ಕಾರ್ಯನಿರ್ವಹಿಸುತ್ತಿರುವರು ಪ್ರತ್ಯೇಕವಾದ DDO ಕೋಡ್ ಹೊಂದಿರುವ ಪ್ರೌಢ ವಿಭಾಗದಲ್ಲಿ ಅವರಿಗೆ ಪ್ರಭಾರ ಭತ್ಯೆ, ಗಳಿಕೆ ರಜೆಯನ್ನು ಕೊಡುತ್ತಿದ್ದು, ಈಗ ಪ್ರೌಢ ವಿಭಾಗದಲ್ಲಿ ಮುಖ್ಯೋಪಾಧ್ಯಾಯರ ಹುದ್ದೆ ಸೃಷ್ಟಿಸಿಲ್ಲ ಎಂದು ಆದೇಶದಲ್ಲಿ ತಿಳಿಸಿರುವುದು, ಗೊಂದಲ ಸೃಷ್ಟಿಸಿದೆ. ಹೀಗಾಗಿ ಪ್ರಭಾರ ಭತ್ಯೆ, ಗಳಿಕೆ ರಜೆ ಹಾಗೂ ಇತರೆ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದು, ಸುಮಾರು ಬಾರಿ ಮುಖ್ಯೋಪಾಧ್ಯಾಯರಿಗೆ ಬಡ್ತಿ ಕೊಟ್ಟರೂ ಸಹ ಸದರಿ ಹುದ್ದೆಯು ಈ ಕಾರಣದಿಂದ ಬಹಳಷ್ಟು ದಿನಗಳಿಂದ ಖಾಲಿಯೇ ಉಳಿದಿದೆ. ಕೂಡಲೇ ಸರಕಾರಿ ಪದವಿಪೂರ್ವ ಕಾಲೇಜುಗಳ ಪ್ರೌಢ ವಿಭಾಗದಲ್ಲಿ ಮುಖ್ಯೋಪಾಧ್ಯಾಯರ ಹುದ್ದೆಯನ್ನು ಸೃಜಿಸಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಅನುಕೂಲ ಮಾಡಿಕೊಡಬೇಕಾಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕ ಕಲ್ಬುರ್ಗಿ ವತಿಯಿಂದ ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಲ್ಬುರ್ಗಿ ವಿಭಾಗ ಪ್ರಮುಖ ಮಹೇಶ ಬಸರಕೋಡ, ಜಿಲ್ಲಾಧ್ಯಕ್ಷ ಚಂದ್ರಶೇಖರ್ ಪಾಟೀಲ, ರುದ್ರಪ್ಪ ಚಟ್ನನಳ್ಳಿ, ನೆಲೋಗಿ ಪ್ರಭಾರ ಮುಖ್ಯಗುರುಗಳಾದ ದೇವೇಂದ್ರಪ್ಪ ಗುಂಡಾಪುರ ಹಾಗೂ ಇತರರು ಉಪಸ್ಥಿತರಿದ್ದರು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-03-2022 Date of Posting 20th or 21st of every month Posted at Periodical Rate

# ಕ.ರಾ.ಮಾ.ಶಿ. ಸಂಘ ಕೇಂದ್ರದ ಪದಾಧಿಕಾರಿಗಳಿಂದ ಶಿಕ್ಷಣ ಸಚಿವರಾದ ಶ್ರೀ ಬಿ. ಸಿ ನಾಗೇಶ್‌ರವರಿಗೆ ಮನವಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಬಿ.ಸಿ.ನಾಗೇಶ ಅವರನ್ನು ಭೇಟಿಮಾಡಿ,

* ಸಂಸ್ಕೃತ ವಿಷಯದ ವಿಧ್ಯಾರ್ಥಿಗಳ ಶಿಷ್ಯವೇತನಕ್ಕೆ ಪ್ರತ್ಯೇಕ ಹೆಡ್ ರಚನೆ.
* ಕೋವಿಡ್ ಕಾರ್ಯ ಮಾಡಿದ ಪಿ.ಯು. ಅನುದಾನಿತ ಉಪನ್ಯಾಸಕರಿಗೆ ಗಳಿಕೆ ರಜೆ ನೀಡುವುದು.
* ಜೆ.ಓ.ಸಿ.ಯಿಂದ ವಿಲೀನವಾದ ಉಪನ್ಯಾಸಕರಿಗೆ ಬಿ.ಇಡಿ. ಮಾಡಿಸುವ ಬಗ್ಗೆ. ಹೀಗೆ ಅನೇಕ ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸಿದರು.

ಜೊತೆಯಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದಿಂದ ನಡೆಯುತ್ತಿರುವ ಪೋನ್ ಇನ್ ಕಾರ್ಯಕ್ರಮ ಮತ್ತು ನನ್ನ ಶಾಲೆ ನನ್ನ ತೀರ್ಥ ಕ್ಷೇತ್ರ ಕಾರ್ಯಕ್ರಮದ ಬಗ್ಗೆಯೂ ಮಂತ್ರಿಗಳಿಗೆ ವಿವರ ನೀಡಲಾಯಿತು. ಮಂತ್ರಿಗಳು ಈ ಎರಡೂ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



## ಭಾವಪೂರ್ಣ ಶ್ರದ್ಧಾಂಜಲಿ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯ ಕಾರ್ಯಕರ್ತ ರಾದ ಅರವಿಂದ ದೇಸಾಯಿ (ಕುಷ್ಟಗಿ)ಯವರು ದಿನಾಂಕ 19.03.2021 ರಂದು ದೈವಾದೀನ ರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಸಂಘಟನಾ ಚತುರರಾದ ಅವರು ಹೃದಯಾಘಾತದಿಂದ ನಮ್ಮನ್ನು ಅಗಲಿರುವುದು ನಮಗೆಲ್ಲರಿಗೂ ತುಂಬಲಾರದ ನಷ್ಟವಾಗಿದೆ.

ಭಗವಂತ ಆತ್ಮಕ್ಕೆ ಸದ್ಗತಿಯನ್ನು ನೀಡಿ, ಪರಿವಾರದವರೆಲ್ಲರಿಗೂ ದುಃಖ ಸಹಿಸಿಕೊಂಡು ಜೀವನದಲ್ಲಿ ಮುನ್ನಡೆಯುವ ಶಕ್ತಿ ನೀಡಲೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಭಗವಂತನಲ್ಲಿ ಪ್ರಾರ್ಥಿಸುತ್ತದೆ.






ಗುಜರಾತ್‌ನಲ್ಲಿ ನಡೆದ ಅ.ಭಾ.ರಾ.ಶೈ. ಮಹಾಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿ ಸಭೆಯಲ್ಲಿ ಕರ್ನಾಟಕದ ಪ್ರತಿನಿಧಿಗಳು

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com